# ಕರಾವಳಿ ತರಂಗಿಣಿ

ಕಡಲ ಕಿನಾರೆಯಿಂದ ಕೆಂಪು ಕೋಟೆಯವರೆಗೆ..

ಕನ್ನಡ ವಾರಪತ್ರಿಕೆ


**ಸುಭಾಷಿತ:**

ಏಕಾಂಗಿಯೆಂಬ ಆತಂಕ ಬೇಡ,
ಜನಿಸಿ ಮರಣಿಸುವುದು ಒಂಟಿಯಾಗಿಯೇ ತಾನೇ..
ಬಡವ ಶ್ರೀಮಂತನೆಂಬ ಅಳುಕು ಬೇಡ,
ಚಿತೆ ಸುಡುವಾಗ ಯಾವುದನ್ನು ನೋಡಲ್ಲ ತಾನೇ..
ದರ್ಪ ಅಹಂಕಾರ ತೋರಿಸಲೇ ಬೇಡ,
ಎಂದೆಂದಿಗೂ ಮಡ್ಡಾಗದೇ ಬಡೋದಿಲ್ಲ ತಾನೇ..
ಕೋಪ ಜಗಳ ಮಾಡಲೇ ಬೇಡ,
ಪೃಥ್ವಿಯಲಿ ಜೀವಿಸುವುದು ತಾಳ್ಮೆ ಇದ್ದರೆ ತಾನೇ.
ನಾನು ನನ್ನದು ಎಂಬುದನ್ನು ತೋರಿಸಲೇ ಬೇಡ,
ಎಲ್ಲವೂ ನಡೆಯುವುದು ಭಗವಂತನಿಂದಲೇ ತಾನೇ..

**ಭಗವಾನ್ ಶ್ರೀಕೃಷ್ಣ**


PRGI No: KNKAN/25/A2498 www.karavalitharangini.com KARAVALI THARANGINI KANNADA Weekly Dakshina Kannada ದಿನಾಂಕ: 06-11-2026 to 12-11-2026 ಬೆಲೆ:10-00 ಸಂಪುಟ–2 ಸಂಚಿಕೆ–06 ಪುಟಗಳು–6












ಬೆಳಕಿನ ಹಬ್ಬ ದೀಪಾವಳಿ ಹತ್ತಿರವಾಗುತ್ತಿದ್ದು, ಸಂಭ್ರಮದೊಂದಿಗೆ ಸುರಕ್ಷತೆಗೆ ಮೊದಲ ಆದ್ಯತೆ ನೀಡೋಣ. ಪಟಾಕಿ ಸಿಡಿಸುವಾಗ ಹತ್ತಿ ಉಡುಪು ಧರಿಸಿ, ಮಕ್ಕಳು ಹಿರಿಯರ ಮೇಲ್ವಿಚಾರಣೆಯಲ್ಲೇ ಸಂಭ್ರಮಿಸಲಿ. ತೆರೆದ ಮೈದಾನಗಳಲ್ಲಿ ಮಾತ್ರ ಪಟಾಕಿ ಹಚ್ಚಿ, ಹತ್ತಿರದಲ್ಲಿ ಒಂದು ಬಕೆಟ್ ನೀರು ಇಟ್ಟುಕೊಳ್ಳಿ. ಪರಿಸರ ಸ್ನೇಹಿ ಹಸಿರು ಪಟಾಕಿಗಳನ್ನು ಬಳಸಿ, ಮೂಕ ಪ್ರಾಣಿ–ಪಕ್ಷಿಗಳಿಗೆ ತೊಂದರೆಯಾಗದಂತೆ ಜಾಗ್ರತೆ ವಹಿಸಿ. ಸಣ್ಣ ಜಾಗರೂಕತೆ ನಮ್ಮ ಹಬ್ಬದ ಸಂತೋಷವನ್ನು ಇಮ್ಮಡಿಗೊಳಿಸುತ್ತದೆ. ಹಸಿರು, ಸುರಕ್ಷಿತ ದೀಪಾವಳಿ ಎಲ್ಲರದಾಗಲಿ!

## ಜೇಬಿಗೆ ಕತ್ತರಿ: ದುಬಾರಿ ಜೀವನ



ಬೆಳಗಿನ ಮುಂಜಾನೆಯ ಕಪ್ ಚಹಾದಿಂದ ಹಿಡಿದು ರಾತ್ರಿ ಮನೆಗೆ ಮರಳುವವರೆಗಿನ ಪ್ರತಿಯೊಂದು ಅಗತ್ಯಕ್ಕೂ ಕಾಸು ಹುಡುಕಬೇಕಾದ ದುಸ್ಥಿತಿ ಇಂದು ಕರ್ನಾಟಕದಲ್ಲಿ ಎದುರಾಗಿದೆ. ಹಾಲಿನ ದರದಲ್ಲಿ ಲೀಟರ್‌ಗೆ ಎಂಟು ರೂಪಾಯಿ ವರೆಗೆ ಭಾರಿ ಏರಿಕೆಯಾಗಿದ್ದು, ನಂದಿನಿ ಹಾಲಿನ ಜೊತೆಗೆ ಖಾಸಗಿ ಡೈರಿ ಸಂಸ್ಥೆಗಳೂ ಬೆಲೆ ಹೆಚ್ಚಿಸಿವೆ. ಪರಿಣಾಮವಾಗಿ ಮೊಸರು, ಮಜ್ಜಿಗೆ, ಬೆಣ್ಣೆ ಮತ್ತು ಹೋಟೆಲ್‌ಗಳ ಚಹಾ–ಕಾಫಿ ಬೆಲೆಗಳೂ ದುಬಾರಿಯಾಗಿವೆ. ಇತ್ತ ಸಾರ್ವಜನಿಕ ಸಾರಿಗೆಯನ್ನೇ ನೆಚ್ಚಿಕೊಂಡಿರುವ **3ನೇ ಪುಟಕ್ಕೆ**

## ಬಡತನ ನಿರ್ಮೂಲನೆಯಲ್ಲಿ ಭಾರತ ಹೊಸ ಮೈಲಿಗಲ್ಲು



**ಮಂಗಳೂರು:** ವಿಶ್ವಬ್ಯಾಂಕ್ ಬಿಡುಗಡೆ ಮಾಡಿರುವ 'ಪಾವರ್ಟಿ ಅಂಡ್ ಈಕ್ವಿಟಿ ಬ್ರೀಫ್' ವರದಿಯಲ್ಲಿ ಭಾರತವು ಬಡತನ ನಿರ್ಮೂಲನೆಯಲ್ಲಿ ಐತಿಹಾಸಿಕ ಮೈಲಿಗಲ್ಲು ಸಾಧಿಸಿದೆ. 2011–12ರಲ್ಲಿ ದೇಶದಲ್ಲಿದ್ದ ಶೇಕಡಾ 27.1 ರಷ್ಟಿದ್ದ ತೀವ್ರ ಬಡತನದ ಪ್ರಮಾಣವು 2023–24ರ ವೇಳೆಗೆ ಶೇಕಡಾ 2.6ಕ್ಕೆ ತೀವ್ರವಾಗಿ ಕುಸಿದಿದೆ. ಕಳೆದ 12 ವರ್ಷಗಳ ಅವಧಿಯಲ್ಲಿ ದೇಶಾದ್ಯಂತ ಸುಮಾರು 49.6 ಕೋಟಿ (496 ಮಿಲಿಯನ್) ಜನರು ಬಡತನದ ರೇಖೆಯಿಂದ ಹೊರಬಂದಿದ್ದಾರೆ ಎಂದು ವಿಶ್ವಸಂಸ್ಥೆಯ ಸಂಸ್ಥೆಯ ಅಂಕಿ ಅಂಶಗಳು ಸ್ಪಷ್ಟಪಡಿಸಿವೆ. ವರದಿಯ ಪ್ರಕಾರ, ಲೋವರ್–ಮಿಡಲ್–ಇನ್‌ಕಮ್ ಆಧಾರದಲ್ಲಿ ಬಡತನದ ಪ್ರಮಾಣವು ಶೇಕಡಾ 57.7ರಿಂದ ಶೇಕಡಾ 16.1ಕ್ಕೆ ಇಳಿಕೆಯಾಗಿದೆ. ಗ್ರಾಮೀಣ ಭಾಗದಲ್ಲಿ ಉದ್ಯೋಗ ಪ್ರಮಾಣ ಹೆಚ್ಚಿರುವುದು, ನೇರ ನಗದು ವರ್ಗಾವಣೆ **3ನೇ ಪುಟಕ್ಕೆ**

## ಧಮ್ಮಿದ್ದರೆ ನನ್ನೊಂದಿಗೆ ನೇರ ಸಂವಾದಕ್ಕೆ ಬರಲಿ: ಪ್ರಕಾಶ್ ರೈ



**ಮಂಗಳೂರು:** ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ಹಾಗು ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರಿಗೆ ನಿಜಕ್ಕೂ ಧಮ್ಮು ಮತ್ತು ತಾಕತ್ತಿದ್ದರೆ ಮತದಾರರ ಪಟ್ಟಿ ಪರಿಷ್ಕರಣೆ (ಎಸ್‌ಐಆರ್) ಹಾಗೂ ಮತಗಳವು ವಿಚಾರದಲ್ಲಿ ಮಾಧ್ಯಮಗಳ ಸಮಕ್ಷಮ ನನ್ನೊಂದಿಗೆ ನೇರ ಸಂವಾದಕ್ಕೆ ಕುಳಿತು ಕೊಳ್ಳಲಿ ಎಂದು ಖ್ಯಾತ ಬಹುಭಾಷಾ ನಟ ಹಾಗೂ ಸಾಮಾಜಿಕ ಹೋರಾಟಗಾರ ಪ್ರಕಾಶ್ ರೈ ಬಹಿರಂಗ ಸವಾಲು ಎಸೆದಿದ್ದಾರೆ. ಮಂಗಳೂರಿನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ **3ನೇ ಪುಟಕ್ಕೆ**







# ಸಂಪ್ರದಾಯ

## ಶ್ರಾವಣ ಮಾಸ




"ಋತುಗಳ ರಾಜ" ಅಂದರೆ "ವಸಂತಋತು" ಹೇಗೋ, ಹಾಗೇಯೇ "ಮಾಸಗಳ ರಾಜ ಶ್ರಾವಣ ಮಾಸ". ಹಿಂದೂ ಪಂಚಾಂಗದ ಐದನೇ ಮಾಸವಾದ ಶ್ರಾವಣ ಮಾಸವು, ಮಾಸಗಳಲ್ಲೇ ಹೆಚ್ಚು ಪವಿತ್ರವೆಂಬ ಹೆಗ್ಗಳಿಕೆ ಪಡೆದಿದೆ. ಪವಿತ್ರವಾದ ಈ ಮಾಸದಲ್ಲಿ ಶಿವನ ಆರಾಧನೆ ಮಾಡಿದರೆ ಬೇಡಿದ್ದನ್ನು ಕೊಡುವ ಶಿವನ ಕೃಪೆ ಸಂಪೂರ್ಣ ಪ್ರಾಪ್ತವಾಗುತ್ತದೆ ಎಂಬುದು ನಂಬಿಕೆ. ಧಾರ್ಮಿಕ ಕಾರ್ಯಗಳು, ಹಬ್ಬಗಳು ಸಾಲು ಸಾಲಾಗಿ ಬರುವ ಈ ಶ್ರಾವಣ ಮಾಸದ ಎಲ್ಲ ದಿನಗಳೂ ಶುಭವೇ ಆಗಿದೆ. ಅಷ್ಟೇ ಅಲ್ಲದೆ, ಮೊದಲನೆಯ ಬಾರಿಗೆ ಯಾವುದಾದರೂ ಕೆಲಸವನ್ನು ಆರಂಭಿಸಲು ಇದು ಪ್ರಶಸ್ತವಾದ ತಿಂಗಳು ಎಂದೇ ಹೇಳಬಹುದು. ಪುರಾಣ ಕಾಲದಲ್ಲಿ ಸಮುದ್ರ ಮಂಥನವಾದ ಸಂದರ್ಭದಲ್ಲಿ ಅಮೃತಕ್ಕಾಗಿ ದೇವತೆಗಳು ಮತ್ತು ದಾನವರು ಕಾದಾಡುತ್ತಿದ್ದರು. ಆಗ 14 ಬೇರೆ ಬೇರೆ ರತ್ನಗಳು ಮೇಲೆದ್ದು ಬರುತ್ತವೆ. ಹದಿಮೂರು ರತ್ನಗಳನ್ನು ದೇವತೆಗಳು ಮತ್ತು ದಾನವರು ಹಂಚಿಕೊಳ್ಳುತ್ತಾರೆ, ಉಳಿದ ಒಂದು ರತ್ನವೇ ಹಾಲಾಹಲ. ಇಡೀ ಪ್ರಕೃತಿಯನ್ನೇ ನಾಶಮಾಡುವ ಶಕ್ತಿಯಿರುವ ಹಾಲಾಹಲವನ್ನು ಶಿವ ಕುಡಿಯುತ್ತಾನೆ. ಪಾರ್ವತಿ ಗಂಟಲನ್ನು ಒತ್ತಿ ಹಿಡಿದ ಕಾರಣ ಹಾಲಾಹಲವು ಗಂಟಲಲ್ಲೇ ಉಳಿದುಕೊಳ್ಳುತ್ತದೆ. ಶಿವನ ಗಂಟಲು ನೀಲಿ ಬಣ್ಣಕ್ಕೆ ತಿರುಗುತ್ತದೆ. ಹಾಗಾಗಿ ಶಿವನಿಗೆ ನೀಲಕಂಠನೆಂಬ ಹೆಸರು ಬರುತ್ತದೆ. ಜಗತ್ತಿನ ಉಳಿವಿಗಾಗಿ ಶಿವ ಹಾಲಾಹಲವನ್ನು ಕುಡಿದದ್ದು ಶ್ರಾವಣ ಮಾಸದಲ್ಲಿ ಆದ ಕಾರಣ ಈ ಮಾಸದಲ್ಲಿ ಶಿವನನ್ನು ಆರಾಧಿಸಲಾಗುತ್ತದೆ. ಈ ಮಾಸದಲ್ಲಿ ಭಕ್ತಿಯಿಂದ ಶಿವನನ್ನು ಆರಾಧಿಸಿದರೆ ಪುಣ್ಯ ಲಭಿಸುತ್ತದೆ. ಪಂಚಾಮೃತದಿಂದ ಹರನಿಗೆ ಅಭಿಷೇಕ ಮಾಡುವುದರ ಜೊತೆಗೆ ಬಿಲ್ವಪತ್ರೆಗಳಿಂದ ಅರ್ಚನೆ ಮಾಡಿದರೆ, ಶಿವ ಸಂತುಷ್ಟನಾಗಿ ಬೇಡಿದ್ದನ್ನು ನೀಡುತ್ತಾನೆ. ಶ್ರಾವಣ ಮಾಸದಲ್ಲಿ ರುದ್ರಾಭಿಷೇಕವನ್ನು ಮಾಡಿಸುವುದರಿಂದ ಮನೆಗೆ ಒಳಿತಾಗುತ್ತದೆ. ಈ ಮಾಸದಲ್ಲಿ ಮಹಾಮೃತ್ಯುಂಜಯ ಮಂತ್ರವನ್ನು ಪಠಿಸುವುದು ಹೆಚ್ಚು ಶ್ರೇಯಸ್ಕರವಾಗಿದೆ. ವಿವಾಹಾಪೇಕ್ಷಿತ ಕನ್ಯೆಯರು ಉತ್ತಮ ವರನನ್ನು ಪಡೆಯಲು ಶ್ರದ್ಧಾ-ಭಕ್ತಿಯಿಂದ ಶ್ರಾವಣ ಸೋಮವಾರ ವ್ರತವನ್ನು ಪಾಲಿಸಿದರೆ ಶುಭಫಲ ದೊರೆಯುವುದರಲ್ಲಿ ಸಂಶಯವಿಲ್ಲ.

# ಸಂಪಾದಕೀಯ

ಕರಾವಳಿ ತರಂಗಿಣಿ

## ಭಕ್ತಿಯ ಪರಾಕಾಷ್ಠೆ ಎನ್ನಲೆ...

- ಲಲಿತಶ್ರೀ ಪ್ರೀತಮ್ ರೈ



ಇಂದು ಯುವ ಪೀಳಿಗೆ ಆಧ್ಯಾತ್ಮಿಕತೆಯತ್ತ ವಾಲುತ್ತಿದ್ದಾರೆ ಎಂದು ಖುಷಿ ಪಡುವುದೋ ಅಥವಾ ಹುಚ್ಚಾಟದಲ್ಲಿ ಮೆರೆಯುತ್ತಿದ್ದಾರೆಂದು ಬೇಜಾರಾಗುವುದೋ ಯಾವುದು ತಿಳಿಯುತ್ತಿಲ್ಲ. ಅಮ್ಮ ಬೈದು ನಮ್ಮ ಸಂಸ್ಕಾರ ಸಂಸ್ಕೃತಿಯ ಬಗ್ಗೆ ಪಾಠ ಮಾಡುತ್ತಿದ್ದರು. ಆದರೆ ಅವರಿಗೆ ತನ್ನ ಮಕ್ಕಳಿಗೆ ನಮ್ಮ ಸಂಸ್ಕೃತಿ ಸಂಸ್ಕಾರ ತಿಳಿದಿರಬೇಕು ಎಂಬ ಹಂಬಲ ಇಂದು ಅರ್ಥವಾಗುತ್ತಿದೆ. ಇಷ್ಟ ಇತ್ತೋ ಇಲ್ಲವೋ ಅವರು ಹೇಳುವುದನ್ನು ಚಾಚೂ ತಪ್ಪದೆ ಪಾಲಿಸುತ್ತಿದ್ದೆವು. ಇದು ನನ್ನೊಬ್ಬಳ ಕಥೆಯಲ್ಲ. 80, 90ರಲ್ಲಿ ಹುಟ್ಟಿರುವ ಎಲ್ಲರ ಅನುಭವ. ಆ ಸಮಯದಲ್ಲಿ ಹುಟ್ಟಿರುವವರು ಬಾಲ್ಯವನ್ನು ತುಂಬಾ ಚೆನ್ನಾಗಿ ಅನುಭವಿಸಿದ್ದಾರೆ ಎನ್ನುವುದು ನನ್ನ ಭಾವನೆ. 60, 70ರಲ್ಲಿ ಕಿತ್ತು ತಿನ್ನುವ ಬಡತನ ಹೆಚ್ಚಾಗಿತ್ತು, ಆದರೆ ನಮ್ಮ ಕಾಲಕ್ಕಾಗಲೆ ಸ್ವಲ್ಪ ಮಟ್ಟಿನ ಸುಧಾರಣೆ ಕಂಡಿದ್ದ ಸಮಯ. ಅಂದಿನ ಮಕ್ಕಳಿಗೆ ಸ್ವಾತಂತ್ರ್ಯ ಇತ್ತು, ಸುತ್ತ ಮುತ್ತ ಬೇಕಾಗುವಷ್ಟು ಮಕ್ಕಳು ಜೊತೆಯಿರುತ್ತಿದ್ದರು. ಅಪ್ಪ ಅಮ್ಮನೋ ಹೊಟ್ಟೆಪಾಡಿನ ಯೋಚನೆಯಲ್ಲಿದ್ದರೆ, ಹಳ್ಳಿಗಳಲ್ಲಂತೂ ರಜಾದಲ್ಲಿ ಮಕ್ಕಳು ಬೆಳಗ್ಗೆ ತಿಂಡಿ ತಿಂದು ಮನೆಯಿಂದ ಹೊರಟರೆ ಯಾವುದೋ ಒಂದು ಮನೆಯಲ್ಲಿ ಊಟವೋ, ಚಹಾವೋ ಅಥವಾ ಕಾಡಿನಲ್ಲಿ ಸಿಗುತ್ತಿದ್ದ ಹಣ್ಣು ಹಂಪಲೋ ಹೊಟ್ಟೆ ತುಂಬುತ್ತಿದ್ದದ್ದು ಅಂತು ಪಕ್ಕ. ನೆನಪಿರಲಿ ಮೇಯಲು ಹೋದ ದನ ಕರುಗಳು ಸಾಯಂಕಾಲ ಹಟ್ಟಿ ಸೇರುವ ಹಾಗೆ ಮಕ್ಕಳು ಅವರವರ ಮನೆ ಸೇರಿ ಬಿಡುತ್ತಿದ್ದರು. ಅಂದು ಟಿವಿಯ ಹಂಗೂ ಇಲ್ಲ ಮೊಬೈಲಿನ ಗುಂಗೂ ಇಲ್ಲ. ಮನೆಗೆ ಬಂದಿದ್ದೆ ಸ್ನಾನ, ಊಟ ನಂತರ ಕಣ್ತುಂಬ ನಿದ್ದೆ. ಆಹಾ ಸ್ನಾನ ಮಾಡಿಸುವಾಗ ಏನು ಮಣ್ಣಿನಲ್ಲಿ ಹೊರಳಾಡಿದ್ದೀಯ ಅಂತ ಅಮ್ಮಂದಿರಿಂದ ನಾಲ್ಕು ಏಟು ತಿನ್ನದಿದ್ದರೆ ಸಮಾಧಾನವೇ ಇಲ್ಲ ಬಿಡಿ. ಇನ್ನು ಶಾಲಾ ದಿನಗಳಲ್ಲಿ ಶಾಲೆಗೆ ಹೋಗುವುದು, ಬರುವುದೇ ಒಂದು ಹಬ್ಬ, ಹತ್ತಿಪ್ಪತ್ತು ಮಕ್ಕಳ ದಂಡು, ಇರುವ, ಬರುವ ಮರಗಳಿಗೆ ಕಲ್ಲು ಬಿಸಾಕಿ ಅದರ ಕಾಯಿಯೋ, ಹಣ್ಣೋ ಕಿತ್ತು ತಿನ್ನುವ ಖುಷಿಯೇ ಬೇರೆ. ಕತ್ತಲಾಗುವ ಮೊದಲು ಹಟ್ಟಿ ಸೇರಿಕೊಳ್ಳಬೇಕು. ಸ್ವಲ್ಪ ತಡವಾದರೂ ಬೆತ್ತ ಪುಡಿ ಪುಡಿ. ಇಂದಿನ ಮಕ್ಕಳಿಗೇನಾದರೂ ಅಂತಹ ಏಟು ಬಿದ್ದರೆ ಅಪ್ಪ, ಅಮ್ಮನ ವಿಡಿಯೋ ಟ್ರೋಲ್ ಆಗಿ ಅವರನ್ನು ಜೈಲಲ್ಲಿ ಕೂರಿಸುವವರೆಗೂ ಬಿಡುವುದಿಲ್ಲ ಬಿಡಿ. ಆದರೆ ಅಂದಿನ ಮಕ್ಕಳಿಗೆ ಅಪ್ಪ ಅಮ್ಮಂದಿರ ಹತ್ತಿರ ಏಟು ತಿನ್ನುವುದೇ ಮಜಾ. ನಮ್ಮಮ್ಮ ಹೊಡೆಯುವಷ್ಟು ಹೊಡೆದು ಕೋಪ ಇಳಿದ ಮೇಲೆ ಮುದ್ದು ಮಾಡಿ ಎಣ್ಣೆ ಹಚ್ಚುತ್ತಿದ್ದದ್ದೇ ಚಂದ. ಆ ಪ್ರೀತಿಯ ಮುಂದೆ ಕೋಪ, ನೋವು ಮಂಗಮಾಯ. ಇದೆಲ್ಲಾ ನೆನೆಸಿಕೊಂಡರೆ ಇಂದಿನ ಮಕ್ಕಳಿಗೆ ಇಂತಹ ಖುಷಿ ಕೊಡುವ ವಿಷಯವೇ ಇಲ್ಲವೇನೋ ಅನ್ನಿಸಿಬಿಡುತ್ತದೆ. ಬೆಳಗಾಗುವ ಮೊದಲೇ ಶಾಲೆಯ ವ್ಯಾನ್ ಬಂದು ನಿಂತು ಬಿಡುತ್ತದೆ ಮನೆಯ ಮುಂದೆ, ಮಕ್ಕಳು ಕಣ್ಣುಜ್ಜಿಕೊಂಡು ವ್ಯಾನ್ ಹತ್ತಿದರೆ ಶಾಲೆಯ ಆವರಣ, ನಂತರ ಕ್ಲಾಸ್ ರೂಂ. ಸ್ವಲ್ಪ ಚುರುಕಾಗಿರುವ ಮಕ್ಕಳಾದರೆ ತರಗತಿಯಲ್ಲಿ ಇರುವ ಮಕ್ಕಳೆಲ್ಲಾ ಗೆಳೆಯ ಗೆಳತಿಯರು. ಇಲ್ಲವಾದರೆ ತರಗತಿಯ ಒಂದು ಮೂಲೆಯಲ್ಲಿ ಕುಳಿತು ಪಾಠ ಕೇಳಿ, ಬೆಲ್ ಹೊಡೆಯುತ್ತಿದ್ದಂತೆ ಹೊರ ಬಂದು ಸ್ವಿಮ್ಮಿಂಗೋ, ಸಂಗೀತವೋ ಅಥವಾ ಡ್ಯಾನ್ಸ್ ಕ್ಲಾಸೋ ಮುಗಿಸಿ ಮನೆಗೆ ಬರುವಷ್ಟರಲ್ಲಿ ಸುಸ್ತೋ ಸುಸ್ತು. ನಂತರ ಟ್ಯೂಷನ್ ಹಾಳು ಮೂಳು ಅಂತ ಮುಗಿಸಿ ನಿದ್ದೆಗೆ ಜಾರುವ ಮೊದಲು ಮೊಬೈಲು ಟೈಮ್ ಬೇರೆ ಇರುತ್ತದೆ. ಅದೆಷ್ಟು ಹೊತ್ತು ಮೊಬೈಲ್ ನೋಡುತ್ತೆ ಎನ್ನುವುದು ಅಪ್ಪ ಅಮ್ಮ ಎಚ್ಚರವಾಗಿರುವುದರ ಮೇಲೆ ಅವಲಂಬಿಸಿರುತ್ತದೆ. ಮತ್ತೆ ಅದೇ ಪುನರಾವರ್ತನೆ. ಮತ್ತೆ ಮಕ್ಕಳಿಗೆಲ್ಲಿ ಸ್ವಾತಂತ್ರ್ಯ ಅವುಗಳಿಗೆಲ್ಲಿಯ ಆಚಾರ ವಿಚಾರಗಳ ಅರಿವು. ಫೇಸ್ ಬುಕ್ ಅಥವಾ ಇನ್ಸ್ಟಾಗ್ರಾಂನಲ್ಲಿ ಬಂದಿದ್ದೇ ವೇದ ವಾಕ್ಯ. ಅಪ್ಪ, ಅಮ್ಮ, ಅಜ್ಜಿಯ ಹೇಳಬೇಕಾದ ಅನುಭವದ ಮಾಹಿತಿ ಇಂದು ಗೂಗಲಿನಲ್ಲಿ ಹುಡುಕಬೇಕಾಗಿದೆ. ಹೀಗಿರುವಾಗ ದೇವರು ದಿಂಡಿರೆಂದರೆ ಎಲ್ಲಿಯ ಭಕ್ತಿ. ಇಂದಿನ ಭಕ್ತಿ ಎಂದರೆ ಇನ್ಸ್ಟಾದಲ್ಲಿ ಪೋಸ್ಟ್ ಹಾಕುವುದು. ಒಂದು ಕಾಲದಲ್ಲಿ ತುಳುನಾಡಿನಲ್ಲಿ ದೈವಗಳೆಂದರೆ ಎಂತಹ ಭಯ, ಭಕ್ತಿ. ಅದರಲ್ಲೂ ಭೂತದ ಕೋಲ ಎಂದರೆ ಇನ್ನಷ್ಟು ಭಕ್ತಿ. ಆದರೆ ಇಂದಿನ ಯುವ ಪೀಳಿಗೆ ಭೂತ ಕೋಲದ ಸಂದರ್ಭದಲ್ಲಿ ಪಾತ್ರಧಾರಿಯ ಜೊತೆ ಸೆಲ್ಫಿ ತೆಗೆದು ಜಾಲತಾಣದಲ್ಲಿ ಹರಿಬಿಡುವಷ್ಟು ಭಕ್ತಿಯ ಪರಾಕಾಷ್ಠೆಗೆ ಏರಿರುತ್ತಾರೆ ಎನ್ನುವುದೇ ವಿಷಾದನೀಯ. ನಮ್ಮ ಸಂಸ್ಕೃತಿ ಸಂಪ್ರದಾಯಗಳು ಎತ್ತ ಸಾಗುತ್ತಿದೆ ಎನ್ನುವುದನ್ನು ಊಹಿಸಲೂ ಸಾಧ್ಯವಾಗುತ್ತಿಲ್ಲ. ಅದಕ್ಕೆ ಸಾಟಿ ಎನ್ನುವಂತೆ ನಮ್ಮ ಸಂಸ್ಕೃತಿ, ಸಂಪ್ರದಾಯವನ್ನು ಟೀಕಿಸುವ ಮುಟ್ಠಾಳರು ಕೂಡ ಸೇರಿಕೊಳ್ಳುತ್ತಾರೆ. ಈ ಕೆಲಸದಲ್ಲಿ ಅನ್ಯ ಧರ್ಮೀಯರು ಒಂದು ಕಡೆಯಾದರೆ ನಮ್ಮಲ್ಲೇ ಹುಟ್ಟ ನಮ್ಮ ಸಂಸ್ಕೃತಿಯನ್ನು ಹಿಯಾಳಿಸುವ ಮನಸ್ಥಿತಿಯವರು ಒಂದು ಕಡೆ. ಇವೆಲ್ಲದರ ಮಧ್ಯೆ ನಮ್ಮ ಆಚಾರ, ವಿಚಾರಗಳನ್ನು ಮುಂದಿನ ಪೀಳಿಗೆಗೆ ತಿಳಿಸಿ ಅವರಿಗೆ ದಾರಿ ದೀಪವಾಗೋಣ...

## ವೈದ್ಯೋನಾರಾಯಣೋ ಹರಿಃ

# ಒಂದೆಲಗ




ಹಿತ್ತಲ ಗಿಡ ಮದ್ದಲ್ಲ ಅಂತ ನಮ್ಮ ಹಿರಿಯರು ಹೇಳಿದ್ದಾರೆ. ಕಾರಣ ನಮ್ಮ ಹಿತ್ತಲಲ್ಲಿ ಬೆಳೆಯುವ ಎಷ್ಟೋ ಗಿಡಗಳು ಅತ್ಯಧಿಕ ಔಷಧೀಯ ಗುಣಗಳನ್ನು ಹೊಂದಿದೆಯಾದರೂ ಅದನ್ನು ಬಳಸುವಲ್ಲಿ ನಾವು ಹಿಂಜರಿಯುತ್ತೇವೆ. ಅಂತಹ ಔಷಧೀಯ ಗಿಡಗಳಲ್ಲಿ ಒಂದೆಲಗ, ಬ್ರಾಹ್ಮಿ ಅಥವ ತಿಮರೆಯು ಒಂದು. ಜೌಗು ಪ್ರದೇಶ ಮತ್ತು ನೈಸರ್ಗಿಕವಾಗಿ ಹರಿಯುವ ನೀರಿನ ಪ್ರದೇಶಗಳಲ್ಲಿ ಬೆಳೆಯುವ ಇದನ್ನು ಆಹಾರವಾಗಿ ಪ್ರತಿನಿತ್ಯ ಸೇವಿಸುವುದರ ಜೊತೆಗೆ ಔಷಧಿಯ ಮೂಲಿಕೆಯಾಗಿಯೂ ಬಳಸಲಾಗುವುದು

ಇದರ ಸೇವನೆಯಿಂದ ಸುಸ್ತು ಬಳಲಿಕೆಯು ದೂರವಾಗಿ ದೇಹಕ್ಕೆ ಶಕ್ತಿ ಬರುತ್ತದೆ.

ದಿನ ಒಂದೆರಡು ಎಲೆಯನ್ನು ತಿನ್ನುವುದರಿಂದ ನೆನಪಿನ ಶಕ್ತಿ ಹಾಗೂ ಬುದ್ಧಿ ಹೆಚ್ಚಿಸಿ, ಖಿನ್ನತೆ ಮತ್ತು ಆತಂಕ ಇತ್ಯಾದಿ ದೂರ ಮಾಡಲು ನೆರವಾಗುವುದು.

ತಲೆಯ ಚರ್ಮವನ್ನು ಬ್ರಾಹ್ಮಿ ತೈಲದಿಂದ ಮಸಾಜ್ ಮಾಡಿ ಕೊಂಚ ನಡೆದಾಡಿ ಒಂದು ಲೋಟ ಹಾಲು ಕುಡಿದು ಮಲಗಿದಾಗ ಗಾಢ ನಿದ್ದೆ ಬರುತ್ತದೆ.


ಒಂದೆಲಗ ತ್ವಚೆಗೆ ಟೋನರ್ ಆಗಿ ಕೆಲಸ ಮಾಡುವುದು. ಇದು ಚರ್ಮವನ್ನು ಬಿಗಿಗೊಳಿಸುವುದು. ಇದರಿಂದಾಗಿ ವಯಸ್ಸಾಗುವ ಲಕ್ಷಣ ತಡೆಯುವ, ನೆರಿಗೆ ನಿವಾರಣೆ ಮಾಡುವಂತಹ ಕ್ರೀಮ್‌ಗಳಲ್ಲಿ ಒಂದೆಲಗ ಬಳಸುವರು. ಬ್ರಾಹ್ಮಿ ಎಣ್ಣೆಯಲ್ಲಿರುವ ಆಂಟಿ ಆಕ್ಸಿಡೆಂಟುಗಳು ದೇಹದಲ್ಲಿ ಸಂಗ್ರಹವಾಗಿದ್ದ ವಿಷಕಾರಿ ವಸ್ತುಗಳನ್ನು ನಿವಾರಿಸಲು ಸಮರ್ಥವಾಗಿವೆ. ವಿಶೇಷವಾಗಿ ಚರ್ಮದ ಹೊರಪದರದಲ್ಲಿ ಅಂಟಿಕೊಂಡಿರುವ ವಿಷಕಾರಿ ವಸ್ತುಗಳನ್ನು ನಿವಾರಿಸಲು ನೆರವಾಗುತ್ತದೆ. ಪರಿಣಾಮವಾಗಿ ಚರ್ಮ ಹೊಸ ಜೀವಕೋಶಗಳನ್ನು ಪಡೆಯುವ ಮೂಲಕ ಸಹಜಕಾಂತಿಯನ್ನು ಹೆಚ್ಚಿಸಿಕೊಳ್ಳುತ್ತದೆ.

ಕೆಮ್ಮು, ಉಸಿರಾಟದ ತೊಂದರೆ ಇರುವವರು ಇದರ ರಸವನ್ನು ಜೇನು ತುಪ್ಪದೊಂದಿಗೆ ಬೆರೆಸಿ ಸೇವಿಸಿದರೆ ಒಳ್ಳೆಯ ಪರಿಣಾಮ ಕಾಣಬಹುದು.

ಒಂದೆಲಗದ ಸೇವನೆ ದೇಹಕ್ಕೆ, ಮನಸ್ಸಿಗೆ ತಂಪು ತರುವುದು ಮಾತ್ರವಲ್ಲದೆ ಸ್ಮರಣಶಕ್ತಿಯನ್ನೂ ವರ್ಧಿಸುತ್ತದೆ, ಇದನ್ನು ನಿತ್ಯ ತಿಂದರೆ ಬುದ್ಧಿ ಚುರುಕಾಗುತ್ತದೆ. ಮಕ್ಕಳಿಗೆ ಬೆಳಗ್ಗೆ ಇದರ ಎರಡೆರಡು ಎಲೆಗಳನ್ನು ತಿನ್ನಲು ಕೊಡುವುದರಿಂದ ಮಕ್ಕಳ ಜ್ಞಾಪಕಶಕ್ತಿ ಹೆಚ್ಚುತ್ತದೆ.

# ಕ್ಷೇತ್ರದರ್ಶನ

ಇಡಗುಂಜಿ ವಿನಾಯಕ ದೇವಸ್ಥಾನವು ಕರ್ನಾಟಕದ ಬಹು ಪ್ರಸಿದ್ಧ ಹಿಂದೂ ಧಾರ್ಮಿಕ ಕೇಂದ್ರವಾಗಿದ್ದು ಸುಮಾರು 1500 ವರ್ಷಕ್ಕೂ ಮಿಗಿಲಾದ ಇತಿಹಾಸ ಹೊಂದಿದೆ. ಇದು ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲ್ಲೂಕಿನ ರಾ.ಹೆ. 66ರಿಂದ 7 ಕಿ.ಮಿ. ದೂರದಲ್ಲಿ ಪೂರ್ವ ದಿಕ್ಕಿನಲ್ಲಿ ಇದೆ. ಈ ದೇವಸ್ಥಾನವನ್ನು ಸಾಮಾನ್ಯವಾಗಿ "ಇಡಗುಂಜಿ ದೇವಸ್ಥಾನ" ಹಾಗೇ ಹಿಂದೆ ಈ ಕ್ಷೇತ್ರಕ್ಕೆ ಇಡಕುಂಜಾವನ, ಕುಂಜವನ, ಗುಂಜಾವನ ಎಂದು ಕರೆಯುತ್ತಿದ್ದರು ಎನ್ನಲಾಗುತ್ತದೆ. ಈ ದೇವಾಲಯದ ಪರಿಸರದಲ್ಲಿನ ಪ್ರಶಾಂತತೆ ನಿಜವಾಗಿಯೂ ಒಂದು ಅದ್ಭುತ ಅನುಭವ. ಈ ದೇವಸ್ಥಾನದಲ್ಲಿ ವಿನಾಯಕ ಮೂರ್ತಿಯು ನಿಂತಿರುವ "ದ್ವಿ ಭುಜ" ಭಂಗಿಯಲ್ಲಿ ಸುಮಾರು 88 ಸೆ.ಮೀ ಎತ್ತರ ಮತ್ತು 59ಸೆ.ಮೀ ಅಗಲವನ್ನು ಹೊಂದಿದೆ. ಮೂರ್ತಿಯ ಬಲ ಕೈಯಲ್ಲಿ ಕಮಲದ ಹೂ ಮತ್ತು ಎಡ ಕೈಯಲ್ಲಿ ಮೋದಕವಿದೆ. ಪುರಾಣದ ಹಿನ್ನೆಲೆಯ ಪ್ರಕಾರ, ಒಮ್ಮೆ ಲೋಕ ಸಂಚಾರಿಯಾದ ನಾರದರು ಪರಶುರಾಮ ಕ್ಷೇತ್ರಗಳಲ್ಲಿ ಅಡ್ಡಾಡುವಾಗ ಅಲ್ಲಿನ ಕ್ಷೇತ್ರ, ತೀರ್ಥ, ತಪೋವನಗಳು ಅವರ ಕಣ್ಣಿಗೆ ಬಿದ್ದವು. ಆದರೆ ಈ ಕ್ಷೇತ್ರಗಳ ಮಹತ್ವವನ್ನು ವರ್ಣಿಸುವವರು ಬಹಳ ವಿರಳವಾಗಿದ್ದರು. ನಂತರ ನಾರದರು ಹಿಮಾಲಯದ ಕಡೆ ಪ್ರಯಾಣ




ಇಡಗುಂಜಿ ಶ್ರೀ ವಿನಾಯಕ

ಬೆಳೆಸಿದರು. ಅಲ್ಲಿ ಅವರಿಗೆ ವಾಲಖಿಲ್ಯ ಋಷಿಗಳ ಭೇಟಿಯಾಯಿತು. ಅನೇಕ ವರ್ಷಗಳಿಂದ ಉಗ್ರ ತಪಸ್ಸು ಮಾಡಿದ್ದರೂ, ಸಿದ್ಧಿ ಇಲ್ಲದೆ ಅತೃಪ್ತರಾಗಿ ಬಳಲುತ್ತಿದ್ದರು. ಇದಕ್ಕೆ ಕಾರಣವನ್ನು ನಾರದ ಮುನಿಗಳು ಕೇಳಿದಾಗ 'ನನ್ನ ತಪಸ್ಸು ಪ್ರಖ್ಯಾತಿಯನ್ನು ಪಡೆದಿದ್ದರೂ ಸಿದ್ಧಿ ಪಡೆಯಲಾಗಲಿಲ್ಲ. ತಮ್ಮ ಸಲಹೆಯನ್ನು ನೀಡಿ' ಎಂದು ವಿನಂತಿಸಿಕೊಂಡರು. ನಾರದರು ಧ್ಯಾನ ಮಗ್ನರಾದಾಗ ಅವರ ಮನಸ್ಸಿಗೆ ಮೂಡಿದ್ದು ಶ್ರೀ ರಾಮನ ಶರದಿಂದ ಉದ್ಭವಿಸಿದ ಶರಾವತಿ ನದಿಯ ತೀರದೊಳಗಿನ ಪ್ರದೇಶಗಳು. ಅಂತೆಯೇ ವಾಲಖಿಲ್ಯ ಮುನಿಯನ್ನು ಅಲ್ಲಿಗೆ ಕರೆದುಕೊಂಡು ಹೋದರು. 'ಶ್ರೀ ಮಹಾಗಣಪತಿಯನ್ನು ಇಲ್ಲಿಗೆ ಕರೆದುಕೊಂಡು ಬರುತ್ತೇನೆ' ಎಂದು ಹೇಳಿ ವಾಲಖಿಲ್ಯರನ್ನು ಅಲ್ಲೇ ಬಿಟ್ಟು ನಾರದರು ಕೈಲಾಸದ ಕಡೆಗೆ ಹೊರಟರು. ಕೈಲಾಸಕ್ಕೆ ನಾರದರು ತಲುಪಿದರು. 'ಪರಶುರಾಮ ಕ್ಷೇತ್ರದಲ್ಲಿ ಶರಾವತಿ ನದಿಯ ಬಳಿ ವನ್ನ ಯೋಗದಿಂದಾಗಿ ಇಡಕುಂಜಾವನ ಎಂದು ಪ್ರಸಿದ್ಧಿಯಾಗಲಿದೆ. ಅಲ್ಲಿ ವಾಲಖಿಲ್ಯ ಮುನಿಯನ್ನು ಬಿಟ್ಟು ಬಂದಿದ್ದೇನೆ. ಅವರು ತಪೋಸಿದ್ಧಿಯಿಲ್ಲದೆ ಬಳಲುತ್ತಿದ್ದಾರೆ. ಆದ್ದರಿಂದ ವಿಘ್ನನಾಶಕನಾದ ಶ್ರೀ ಮಹಾಗಣಪತಿಯು ಅಲ್ಲಿ ಕ್ಷೇತ್ರಾಧೀಶನಾಗಿ ನಿಲ್ಲಬೇಕು' ಎಂದು ಶಿವ-ಪಾರ್ವತಿಯರನ್ನು ನಾರದರು ಬೇಡಿಕೊಂಡರು. ಇದರ ಪರಿಣಾಮವಾಗಿ ಇಡಗುಂಜಿಯಲ್ಲಿ ಗಣಪತಿಯು ಕ್ಷೇತ್ರಾಧೀಶನಾದನು. ಪರಮೇಶ್ವರ ಪುತ್ರನ ದರ್ಶನ ಭಾಗ್ಯದಿಂದ ವಾಲಖಿಲ್ಯರು ಮಹಾಗಣಪತಿಯ ಸ್ತೋತ್ರ ಮಾಡಿದರು. ಅಂತೆಯೇ 'ನಿಮ್ಮ ಕೀರ್ತಿಯು, ಈ ಸ್ಥಾನ ಮಹಿಮೆಯು ಲೋಕ ಪ್ರಸಿದ್ಧಿಯಾಗಲಿ' ಎಂದು ಗಣಪನು ಹರಸಿದನಂತೆ. ಸುತ್ತಲೂ ಬೆಟ್ಟ-ಗುಡ್ಡಗಳಿಂದ ಕೂಡಿರುವ ಇಡಗುಂಜಿ ದೇವಸ್ಥಾನ ಇಳಿಜಾರಿನ ಪ್ರದೇಶದಲ್ಲಿದೆ. ಇಲ್ಲಿನ ಗಣಪತಿಯ ವಿಗ್ರಹವು ಪೂರ್ವಾಭಿಮುಖವಾಗಿ ಪ್ರತಿಷ್ಠಾಪನೆಗೊಂಡಿದೆ. ಕಪ್ಪು ಕಲ್ಲಿನ ವಿಗ್ರಹ ಮೂರ್ತಿ ಇದಾಗಿದೆ. ದೇವಸ್ಥಾನದ ಮುಂಭಾಗದಲ್ಲಿ ಪಾಕಶಾಲೆಯಿದೆ. ಇನ್ನೂ ಸ್ವಲ್ಪ ಮುಂದೆ ಪುಷ್ಕರಣಿ, ಎಡಭಾಗದಲ್ಲಿ ಯಾಗಶಾಲೆ ಇದೆ. ದೇವಸ್ಥಾನದಿಂದ ಸ್ವಲ್ಪ ದೂರದಲ್ಲಿ ಮಯೂರ ಪ್ರಸಾದ ಭೋಜನ ಶಾಲೆಯಿದೆ. ದೇವಸ್ಥಾನದಲ್ಲಿ ಪ್ರಸಾದ ರೂಪದಲ್ಲಿ ಆಹಾರವನ್ನು ಕೊಡುತ್ತಾರೆ. ದೇವಸ್ಥಾನದ ಆಡಳಿತ ಮಂಡಳಿಯ ಅತಿಥಿ ಗೃಹಗಳು ಕೂಡ ಇಲ್ಲಿ ಲಭ್ಯವಿದೆ. ಅತಿಥಿ ಗೃಹದಲ್ಲಿ ಉಳಿದುಕೊಳ್ಳಲು ಮುಂಗಡವಾಗಿ ಕಾಯ್ದಿರಿಸಬೇಕು. ದರ್ಶನದ ಸಮಯ ಬೆಳಗ್ಗೆ 8 ರಿಂದ ರಾತ್ರಿ 8 ಘಂಟೆಯವರೆಗೆ. ಮಧ್ಯಾಹ್ನ 12-30 ರಿಂದ 3 ಘಂಟೆಯವರೆಗೆ ದೇವಸ್ಥಾನ ಮುಚ್ಚಿರುತ್ತದೆ. ಭಕ್ತಾದಿಗಳೆಲ್ಲರಿಗೂ ಮಧ್ಯಾಹ್ನ ಉಚಿತ ಊಟದ ವ್ಯವಸ್ಥೆ ಇದೆ. ಮಧ್ಯಾಹ್ನ ಮಹಾಪೂಜೆಗೆ ಒಂದು ಘಂಟೆ ಮುಂಚೆ ದೇವಾಲಯದ ಸೇವಾ ಕಚೇರಿಯಲ್ಲಿ ಉಚಿತ ಊಟದ ಪಾಸುಗಳನ್ನು ವಿತರಿಸುತ್ತಾರೆ. ಅದನ್ನು ಪಡೆದು ಊಟಕ್ಕೆ ತೆರಳಬೇಕು. ದೂರದೂರಿನ ಪ್ರವಾಸಿಗರು ಉಳಿದುಕೊಳ್ಳಲು ದೇವಸ್ಥಾನದ ಅತಿಥಿ ಗೃಹವಿದೆ. ಇಲ್ಲಿನ ಅಕ್ಕಪಕ್ಕದಲ್ಲಿ ಮುರುಡೇಶ್ವರ, ಜೋಗ, ಗೋಕರ್ಣದಂತಹ ಸುಂದರ ಪ್ರವಾಸಿ ತಾಣಗಳಿವೆ. ಬಸ್ಸು, ರೈಲು ವ್ಯವಸ್ಥೆಯಿದೆ.

# ಕಾಮಧೇನು

## ಪ್ರಕೃತಿಯೇ ನಮಗೆ ದಾರಿ ದೀಪ

@ ಕೃಷ್ಣಾಮೃತ

ಸಿಂಧೂ ನದಿ ವಿಶ್ವಾದಲ್ಲೇ ಅತ್ಯಂತ ಉದ್ದದ ನದಿಗಳಲ್ಲಿ ಒಂದಾಗಿದೆ. ಮಾನಸ ಸರೋವರದ ಉತ್ತರಕ್ಕೆ ಸುಮಾರು 100ಕಿ.ಮಿ ದೂರದ, ಸಮುದ್ರ ಮಟ್ಟದಿಂದ ಸುಮಾರು 17000 ಅಡಿಗಳಷ್ಟು ಎತ್ತರದ ಕೈಲಾಸ ಪರ್ವತದಲ್ಲಿ ಹುಟ್ಟುತ್ತದೆ. ಇಲ್ಲಿಂದ ಸಿಂಧೂ ನದಿಯೊಂದಿಗೆ ಸಟ್ಲೇಜ್ ಮತ್ತು ಬ್ರಹ್ಮಪುತ್ರ ನದಿಗಳು ಕೂಡ ಹರಿಯುತ್ತದೆ. ಜಮ್ಮು ಮತ್ತು ಕಾಶ್ಮೀರದ ಲಡಾಖ್ ಪ್ರದೇಶದ ಮೂಲಕ ಹರಿದು ಸ್ಕರ್ಡೂ ಎಂಬಲ್ಲಿ ಶಯೋಕ್ ನದಿ ಸೇರಿಕೊಳ್ಳುತ್ತದೆ. ಸಿಂಧುವನ್ನು ಸಿಂಗ ಗೆ ಚು ಅಂದರೆ ಟಿಬೇಟ್ ಭಾಷೆಯಲ್ಲಿ ಸಿಂಹದ ತಂದೆ ಎಂದು ಕರೆಯುತ್ತಾರೆ. ಮುಂದೆ ಕಾಶ್ಮೀರಕ್ಕೆ ಬರುವಾಗ ಉಗಮಸ್ಥಾನದಿಂದ ಸುಮಾರು 4000 ಅಡಿಗಳಷ್ಟು ಕೆಳಗೆ ಬಂದಿರುತ್ತದೆ. ಹಿಮಾಲಯದ ಕಡಿದಾದ ಕಣಿವೆಗಳಲ್ಲಿ ಹರಿದು ಬರುವ ಸಿಂಧೂ ಪಂಜಾಬ್‌ನ ಅಟಕ್ ಪ್ರದೇಶದಲ್ಲಿ ಬಯಲು ಸೇರುತ್ತಾಳೆ. ಈಗ ಇವಳು ಸಮುದ್ರ ಮಟ್ಟದಿಂದ ಕೇವಲ ಸಾವಿರದೈನೂರು ಅಡಿಗಳಷ್ಟು ಎತ್ತರದಲ್ಲಿರುತ್ತಾಳೆ. ಅಟಕ್ ಹತ್ತಿರ ಕಾಬೂಲ್ ನದಿಯೂ ಸೇರಿ ಸುಮಾರು 800 ಅಡಿಗಳಷ್ಟು ಅಗಲಗೊಂಡು, ಮಿಥುನ್‌ಕೋಟ್ ಎಂಬಲ್ಲಿ ಐದು ಪ್ರಮುಖ ನದಿಗಳಾದ ಝೀಲಂ, ಚೆನಾಬ್ ರವಿ, ಬಿಯಾಸ್ ಮತ್ತು ಸಟ್ಲೇಜ್ ಪೂರ್ವ ಭಾಗದಲ್ಲಿ ಸಿಂಧೂ ನದಿಯನ್ನು ಸೇರುತ್ತವೆ. ಜೊತೆಗೆ ಸಣ್ಣ ನದಿಗಳಾದ ಹ್ಯಾರೋ ಮತ್ತು ಸೋನ್ ಕೂಡ ಸಿಂಧೂಗೆ ಸೇರುವುದು. ಪಶ್ಚಿಮ ಬದಿಯಲ್ಲಿ ಹಲವಾರು ಸಣ್ಣ ನದಿಗಳು ಸಿಂಧೂಗೆ ಸೇರುತ್ತದೆ. ಇವುಗಳಲ್ಲಿ ಕಾಬೂಲ್ ದೊಡ್ಡ ನದಿ ಮತ್ತು ಅದರ ಮುಖ್ಯ ಉಪನದಿಗಳಾದ ಸ್ವಾತ್, ಪಂಜಕೋರ ಮತ್ತು ಕುನಾರ್. ಸಿಂಧೂ ನದಿಯ ವಾರ್ಷಿಕ ಹರಿವು ನೈಲ್ ನದಿಯ ಎರಡರಷ್ಟು ಮತ್ತು ಟೈಗ್ರಿಸ್ ಮತ್ತು ಯೂಫ್ರಟಿಸ್ ನದಿಗಳ ಒಟ್ಟು ಹರಿವಿನ ಮೂರರಷ್ಟು. ಪ್ರಾಚೀನ ಭಾರತದ ಸುಮಾರು ಕ್ರಿ.ಪೂ 1500 ರ ಋಗ್ವೇದದ ಆರ್ಯರು ರಚನೆ ಮಾಡಿದ ಶ್ಲೋಕಗಳಲ್ಲಿ ಸಿಂಧೂ ನದಿಯನ್ನು ಉಲ್ಲೇಖಿಸುತ್ತವೆ. ಅದೇ ದೇಶದ ಹೆಸರಿನ ಮೂಲವಾಗಿದೆ ಎನ್ನಲಾಗುತ್ತದೆ. ವೈದಿಕ ಸಾಹಿತ್ಯದಲ್ಲೂ ಸಿಂಧೂ ನದಿಯ ಉಲ್ಲೇಖವನ್ನು ನೋಡಬಹುದು. ಮಹಾಕಾವ್ಯ, ಪುರಾಣಗಳಲ್ಲಿಯೂ ನದಿಯ ಮಹಿಮೆಯನ್ನು ಹಾಡಿದ್ದಾರೆ. ಸಿಂಧೂ ಎಂಬುದು ಜಗತ್ತಿನ ಇತಿಹಾಸದಲ್ಲಿ ಅತ್ಯಂತ ಪ್ರಾಚೀನ ಶಬ್ದ ಎಂದರೆ ತಪ್ಪಾಗಲಾರದು. ಇನ್ನು ಪುರಾಣಗಳಲ್ಲಿಯೂ ನಾವು ಸಿಂಧುವಿನ ಉಲ್ಲೇಖವನ್ನು ಕೇಳಿದ್ದೇವೆ. ಪರಶಿವನು, ದಕ್ಷ ಯಜ್ಞದಲ್ಲಿ ಆಹುತಿಗೊಂಡ ಸತಿಯ ಶರೀರವನ್ನು ಹೊತ್ತುಕೊಂಡು ಭರತ ವರ್ಷದೆಲ್ಲೆಡೆ ಸುತ್ತುತ್ತಿದ್ದನು, ಆಗ ಕರಾಚಿಯ ಬಳಿ ಸತಿಯ ಬ್ರಹ್ಮರಂಧ್ರವು ಕಳಚಿ ಬೀಳುತ್ತದೆ. ಈ ಭಾಗವೇ ಸಿಂಧೂ ಮತ್ತು ಬಲೂಚಿಸ್ಥಾನ ಗಡಿಯಲ್ಲಿರುವ ಹಿಂಗುಲಾಜ ಎನ್ನಲಾಗುತ್ತದೆ. ಇಲ್ಲಿ ಭೈರವಿದೇವಿಯ ಶಕ್ತಿಪೀಠವಿದೆ. ರಾಮಾಯಣದಲ್ಲಿ ದಶರಥನು ಕೋಪಿಸಿ ಕೂತ ಕೈಕೇಯಿಗೆ" ನನ್ನ ಸಾಮ್ರಾಜ್ಯದಲ್ಲಿ ಸೂರ್ಯನು ಮುಳುಗುವುದಿಲ್ಲ, ಸಿಂಧು, ಸೌವೀರ, ಸೌರಾಷ್ಟ್ರ, ಅಂಗ, ವಂಗ, ಮಗಧ, ಕಾಶಿ ಕೋಸಲ ಎಲ್ಲವೂ ಸೇರಿದೆ. ಇವುಗಳಲ್ಲಿ ಬಹುಮುಖ್ಯವಾದದ್ದು ನಿನಗೇನು ಬೇಕು ಕೇಳು" ಎನ್ನುತ್ತಾನೆ. ಇಲ್ಲಿಯೂ ಸಿಂಧುವಿನ ವಾಖ್ಯಾನ ನೋಡಬಹುದು. ಮಹಾಭಾರತ ಕಾಲದಲ್ಲಿ ಸಿಂಧೂ ದೇಶವನ್ನು ಧೃತರಾಷ್ಟ್ರನ ಅಳಿಯನಾದ ಜಯದ್ರಥನು ಆಳುತ್ತಿದ್ದನು. ಸಿಂಧು ನದಿ ಸ್ನಾನ ಮಾಡಿದರೆ ಸ್ವರ್ಗ ಪ್ರಾಪ್ತಿಯಾಗುತ್ತದೆ ಎನ್ನುವುದು ಕೂಡ ಮಹಾಭಾರತದಲ್ಲಿ ಉಲ್ಲೇಖವಾಗಿರುವುದನ್ನು ನೋಡಬಹುದು. ಭಗವಾನ್ ಬುದ್ಧನು ಕೂಡ ಸಿಂಧೂ ನದಿ ಪ್ರದೇಶಗಳಿಗೆ ಭೇಟಿ ನೀಡಿದ್ದ ಎನ್ನುವುದರ ಉಲ್ಲೇಖವಿದೆ ಇದರ ಕುರುಹಾಗಿ ಸಿಂಧ್ ಪ್ರಾಂತ್ಯದಲ್ಲಿ ಇಂದಿಗೂ ಬೌದ್ಧಸ್ತೂಪಗಳನ್ನು ಕಾಣಬಹುದು. ಕಾಶ್ಮೀರದ ಪ್ರಾಚೀನ ಗ್ರಂಥ ರಾಜತರಂಗಿಣಿಯಲ್ಲಿಯೂ ಸಿಂಧೂ ನದಿಯ ಬಗ್ಗೆ ಉಲ್ಲೇಖವಿದೆ. ಕಾಶ್ಮೀರದ ಮೂಲಕ ಉತ್ತರ ಪಾಕಿಸ್ತಾನಕ್ಕೆ ಹರಿದು, ಉಗಮಸ್ಥಾನದಿಂದ ಸುಮಾರು 3200 ಕಿ.ಮಿ.ಗಳ ಸುದೀರ್ಘ ಪ್ರಯಾಣವನ್ನು ಕರಾಚಿ ನಗರದ ಬಳಿ ಅರಬ್ಬಿ ಸಮುದ್ರದಲ್ಲಿ ಅಂತ್ಯಗೊಳಿಸುತ್ತಾಳೆ ಸಿಂಧೂ. ಇದು ಪಾಕಿಸ್ತಾನದ ಜೀವನದಿಗಳಲ್ಲೊಂದಾಗಿದೆ.




# ಕಲ್ಪವೃಕ್ಷ

@ಪ್ರೀತಂ ರೈ ಇ

## ಲೆಫ್.ಕ. ಅ. ಬು. ತಾರಾಪೋರ್

ಪಾಕಿಸ್ತಾನವು ತಮ್ಮ "ಆಪರೇಷನ್ ಜಿಬ್ರಾಲ್ಟರ್" ಅನ್ನು ಪ್ರಾರಂಭಿಸಿದ ನಂತರ, ಯುದ್ಧವನ್ನು 27 ಆಗಸ್ಟ್ 1965 ರಂದು ಘೋಷಿಸಲಾಯಿತು. ಪ್ರತೀಕಾರದ ಕ್ರಿಯಾ ಯೋಜನೆಯ ಭಾಗವಾಗಿ, ಭಾರತೀಯ ಸೈನ್ಯವು ಸಿಯಾಲ್‌ಕೋಟ್ ಸೆಕ್ಟರ್‌ನಲ್ಲಿ ಚಾವಿಂಡಾ ಮತ್ತು ಫಿಲೋರಾವನ್ನು ವಶಪಡಿಸಿಕೊಳ್ಳುವ ತಂತ್ರವನ್ನು ರೂಪಿಸಿತು. ಚಾವಿಂಡಾ ಪ್ರದೇಶವನ್ನು ಪಾಕಿಸ್ತಾನಿ ರಕ್ಷಾಕವಚ ಮತ್ತು ಪದಾತಿದಳದ ಎರಡು ರೆಜಿಮೆಂಟ್‌ಗಳು ಆಕ್ರಮಿಸಿಕೊಂಡವು. ಸೆಪ್ಟೆಂಬರ್ 11, 17 ರಂದು ಲೆ.ಕ. ತಾರಾಪೋರ್ ನೇತೃತ್ವದಲ್ಲಿ ತಂಡವು ಫಿಲೋರಾ ಮೇಲೆ ಹಿಂಬದಿಯಿಂದ ಹಠಾತ್ ದಾಳಿಯನ್ನು ಯೋಜಿಸಿತು. ಫಿಲೋರಾ ಮತ್ತು ಚಾವಿಂಡಾ ನಡುವೆ ರೆಜಿಮೆಂಟ್ ಮುಂದೆ ಸಾಗುತ್ತಿದ್ದಾಗ, ವಜಿರಾಲಿಯಿಂದ ಶತ್ರುಗಳ ರಕ್ಷಾಕವಚದಿಂದ ಪ್ರತಿದಾಳಿಯಾಯಿತು. ಲೆಫ್ಟಿನೆಂಟ್ ಕರ್ನಲ್ ತಾರಾಪೋರ್ ತನ್ನ ನೆಲವನ್ನು ಹಿಡಿದಿಟ್ಟುಕೊಂಡು ಫಿಲೋರಾ ಮೇಲೆ ತನ್ನ ಸ್ಕ್ವಾಡ್ರನ್‌ಗಳಲ್ಲಿ ಒಂದನ್ನು ಮತ್ತು ಪದಾತಿದಳದ ಬೆಟಾಲಿಯನ್ ಬೆಂಬಲದೊಂದಿಗೆ ಧೈರ್ಯದಿಂದ ಆಕ್ರಮಣ ಮಾಡಿದರು. ಎರಡು ಕಡೆಯ ನಡುವೆ ತೀವ್ರವಾದ ಯುದ್ಧವು 13 ಟ್ಯಾಂಕ್‌ಗಳ ನಾಶಕ್ಕೆ ಕಾರಣವಾಗಿ, ಪಾಕಿಸ್ತಾನಿಯರು ಚಾವಿಂಡವನ್ನು ತೊರೆದರೂ ಫಿಲೋರಾವನ್ನಿ ಸೆರೆಹಿಡಿಯಲ್ಪಟ್ಟರು. ಲೆಫ್ಟಿನೆಂಟ್ ಕರ್ನಲ್ ತಾರಾಪೋರ್ ಅದ್ಭುತವಾಗಿ ಹೋರಾಡಿದರು ಆದರೆ ಯುದ್ಧದಲ್ಲಿ ಗಂಭೀರವಾಗಿ ಗಾಯಗೊಂಡರೂ ಹಿಂಜರಿಯದೆ ಅವರು ವಜಿರಾಲಿ, ಜಸೋರಾನ್ ಮತ್ತು ಬುತೂರ್-ಡೋಗ್ರಾಂಡಿಯನ್ನು ವಶಪಡಿಸಿಕೊಳ್ಳಲು ದಾಳಿಗಳನ್ನು ಯೋಜಿಸಿದರು. 13/14 ಸೆಪ್ಟೆಂಬರ್ 1965 ರಂದು, ಲೆಫ್ಟಿನೆಂಟ್ ಕರ್ನಲ್ ತಾರಾಪೋರ್ ಇನ್ನೂ ಗಾಯಗೊಂಡಿದ್ದರೂ 17 ಕುದುರೆ ಮತ್ತು 9 ಗರ್ವಾಲ್ ಬೆಟಾಲಿಯನ್ ಜೊತೆಯಲ್ಲಿ ಪದಾತಿದಳದ



ದಾಳಿಯನ್ನು ಪ್ರಾರಂಭಿಸಿದರು. ವಜಿರಾಲಿಯನ್ನು ಸೆಪ್ಟೆಂಬರ್ 14 ರಂದು ವಶಪಡಿಸಿಕೊಳ್ಳಲಾಯಿತು. ಮುಂದೆ ಲೆಫ್ಟಿನೆಂಟ್ ಕರ್ನಲ್ ತಾರಾಪೋರ್ ಬುತೂರ್ ಮತ್ತು ಡೋಗ್ರಾಂಡಿ ಪ್ರದೇಶಗಳಲ್ಲಿ ಅಡಗಿಕೊಂಡಿದ್ದ ಶತ್ರು ಪಡೆಗಳ ಮೇಲೆ ದಾಳಿ ನಡೆಸಿ, ಅರು ಶತ್ರು ಟ್ಯಾಂಕ್‌ಗಳನ್ನು ನಾಶಪಡಿಸಿದರು. ಜಸ್ಸೋರಾನ್ ಜೊತೆಗೆ 9 ಡೋಗ್ರಾ ಬಿಎನ್ ಮತ್ತು ಬುತೂರ್ ಮತ್ತು ಡೋಗ್ರಾಂಡಿ ಜೊತೆಗೆ 8 ಪದಾತಿಸೈನ್ಯವನ್ನು ಹಿಂಬದಿಯಿಂದ ಚಾವಿಂಡ ಮೇಲೆ ಆಕ್ರಮಣ ಮಾಡುವುದನ್ನು ಬೆಂಬಲಿಸುತ್ತ, ಗರ್ವಾಲ್ ರೈಫಲ್ಸ್‌ನ್ನು ವಶಪಡಿಸಿಕೊಳ್ಳಲಾಯಿತು. ಅವರ ನಾಯಕತ್ವದಿಂದ ಸ್ಫೂರ್ತಿ ಪಡೆದ ರೆಜಿಮೆಂಟ್ ಶತ್ರುಗಳ ರಕ್ಷಾಕವಚದ ಮೇಲೆ ದಾಳಿ ಮಾಡಿ ಸುಮಾರು ಅರವತ್ತು ಪಾಕಿಸ್ತಾನಿ ಸೇನಾ ಟ್ಯಾಂಕ್‌ಗಳನ್ನು ನಾಶಪಡಿಸಿತು. ಭಾರತದ ಕೇವಲ ಒಂಬತ್ತು ಟ್ಯಾಂಕ್ ನಾಶವಾಗಿ ಸಾವುನೋವುಗಳನ್ನು ಅನುಭವಿಸಿತು. ಆದಾಗ್ಯೂ, ಲೆಫ್ಟಿನೆಂಟ್ ಕರ್ನಲ್ ತಾರಾಪೋರ್ ಅವರು ಕಠಿಣ ಸವಾಲನ್ನು ಒಡ್ಡುತ್ತಿದ್ದಾಗ ಶತ್ರುಗಳ ಶೆಲ್ ಅವರ ಟ್ಯಾಂಕ್‌ನ್ನು ಸುಟ್ಟುಹಾಕಿತು. ಇದರಿಂದ ಅವರನ್ನು ಬೆಂಕಿ ಆವರಿಸಿ, ಲೆಫ್ಟಿನೆಂಟ್ ಕರ್ನಲ್ ತಾರಾಪೋರ್ ಯುದ್ಧಭೂಮಿಯಲ್ಲಿ ಹುತಾತ್ಮರಾದರು. ಲೆಫ್ಟಿನೆಂಟ್ ಕರ್ನಲ್ ಎ ಬಿ ತಾರಾಪೋರ್ ಅವರ ಅತ್ಯುತ್ತಮ ಧೈರ್ಯ, ನಾಯಕತ್ವ, ಅದಮ್ಯ ಮನೋಭಾವ ಮತ್ತು ಪರಮ ತ್ಯಾಗಕ್ಕಾಗಿ ರಾಷ್ಟ್ರದ ಅತ್ಯುನ್ನತ ಶೌರ್ಯ ಪ್ರಶಸ್ತಿ "ಪರಮ ವೀರ ಚಕ್ರ" ನೀಡಲಾಯಿತು. ಲೆಫ್ಟಿನೆಂಟ್ ಕರ್ನಲ್ ಅರ್ದೇಶಿರ್ ಬುರ್ಜೋರ್ಜಿ ತಾರಾಪೋರ್ ಅವರು 18 ಆಗಸ್ಟ್ 1923 ರಂದು ಮುಂಬೈನಲ್ಲಿ ಜನಿಸಿದರು. ಲೆಫ್ಟಿನೆಂಟ್ ಕರ್ನಲ್ ತಾರಾಪೋರ್ ಅವರು ಶಿವಾಜಿಯ ಸೈನ್ಯದಲ್ಲಿ ಸೇವೆ ಸಲ್ಲಿಸಿದ ಮಹಾನ್ ಯೋಧ ರತನ್‌ಜೀಬಾ ಅವರ ಕುಟುಂಬಕ್ಕೆ ಸೇರಿದವರು. ಕರ್ನಲ್ ತಾರಾಪೋರ್ ಅವರ ತಂದೆ ಬುರ್ಜೋರ್ಜಿ ಅವರು ಹಿಂದಿನ ಹೈದರಾಬಾದ್ ರಾಜ್ಯದ ಕಸ್ಟಮ್ಸ್ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು. ತಾರಾಪೋರ್ ತಮ್ಮ ಬಡ್ತಿಗಳನ್ನು ಪಡೆದು ಅಂತಿಮವಾಗಿ ಕಮಾಂಡಿಂಗ್ ಆಫೀಸರ್ ಆದರು. ಇವರನ್ನು ಕರಾವಳಿ ತರಂಗಿಣಿ ಹೆಮ್ಮೆಯಿಂದ ನೆನಪಿಸಿ ಕೊಳ್ಳುತ್ತಿದೆ.

# ಪಾರಿಜಾತ

ಕರಾವಳಿ ತರಂಗಿಣಿ

ಒಂದು ಮನೆಯಲ್ಲಿ ಹುಟ್ಟಿ ಇನ್ನೊಂದು ಮನೆ ಬೆಳಗುವ ಹೆಣ್ಣು ಜೀವನದ ಹಾದಿಯಲ್ಲಿ ನದಿ ಹಾಡು ಮೇಡುಗಳನ್ನು ಹಿಮ್ಮೆಟ್ಟಿ ಹರಿಯುವಂತೆ ಮುಂದೆ ಸಾಗುತ್ತಾಳೆ. ಹೆಣ್ಣು ಶ್ರೀಮಂತಳಾಗಿ ಹುಟ್ಟಿದಾಗ ಅವಳ ಹಾದಿ ಬಡ ಹೆಣ್ಣು ಮಕ್ಕಳಿಗಿಂತ ಸ್ವಲ್ಪ ಸುಗಮವಾಗಿ ಕಂಡರೂ ಮನೆಯಿಂದ ಹೊರಬಂದಾಗ ಅವಳು ಕಷ್ಟದ ಹಾದಿಯನ್ನು ತುಳಿಯಲೇ ಬೇಕಾಗುತ್ತದೆ. ಆದರೆ ಅದೆಂತಹ ಕಲ್ಲು ಮುಳ್ಳಿನ ಹಾದಿಯಿದ್ದರೂ ಮುನ್ನಡೆಯುವ ಛಲ ಹೆಣ್ಣಿನಲ್ಲಿರುವುದು ವಿಶೇಷ. ಅಂತಹ ಎಷ್ಟೋ ಹೆಣ್ಣು ಮಕ್ಕಳು ಇಂದು ಸಮಾಜಕ್ಕೆ ಮಾದರಿಯಾಗಿದ್ದಾರೆ. ಅವರ ಸಾಧನೆಯ ಹಾದಿಯು ಬೇರೆ ಹೆಣ್ಣು ಮಕ್ಕಳಿಗೆ ದಾರಿ ದೀಪವಾಗಿದ್ದು ಕೂಡ ಇದೆ. ಅಂತಹ ಹೆಣ್ಣು ಮಕ್ಕಳಲ್ಲಿ ಕರಾವಳಿ ತರಂಗಿಣಿಯ ಇಂದಿನ ಆಯ್ಕೆ ಸ್ವಾತಂತ್ರ ಹೋರಾಟಗಾರ್ತಿ, ಗಾಂಧಿವಾದಿ "ಯಶೋಧರ ದಾಸಪ್ಪ". ಯಶೋಧರ ದಾಸಪ್ಪ ಅವರು ಮೇ 28, 1905 ರಂದು ಬೆಂಗಳೂರಿನಲ್ಲಿ ಒಕ್ಕಲಿಗ ಕುಟುಂಬದಲ್ಲಿ ಜನಿಸಿದರು. ಪ್ರಸಿದ್ಧ ಸಮಾಜ ಸೇವಕರಾದ ಕೆ.ಎಚ್.ರಾಮಯ್ಯ ಅವರ ಮಗಳಾದ ಇವರು ಶ್ರೀಮಂತ ಕುಟುಂಬದಲ್ಲಿ ಜನಿಸಿದರೂ, ಸಾಮಾಜಿಕ ಕಾರ್ಯಕರ್ತೆಯಾಗಲು ಮತ್ತು ಭಾರತೀಯ ಸ್ವಾತಂತ್ರ್ಯ ಹೋರಾಟಕ್ಕೆ ಸೇರಲು ಬಯಸಿದರು. ಮೊದಲಿಗೆ ಕುಟುಂಬದ ವಿರೋಧವನ್ನು ಅನುಭವಿಸಿದ್ದರೂ ನಂತರದ ದಿನಗಳಲ್ಲಿ ಅವರಿಗೆ ಬೆಂಬಲ ದೊರಕಿತು. ಯಶೋಧರ ದಾಸಪ್ಪ ಒಬ್ಬ ಭಾರತೀಯ ಸ್ವಾತಂತ್ರ್ಯ ಹೋರಾಟಗಾರರಾಗಿ, ಗಾಂಧಿವಾದಿಯಾಗಿ, ಸಮಾಜ ಸುಧಾರಕರಾಗಿ ನಿಜಲಿಂಗಪ್ಪನವರ ಆಡಳಿತಾವಧಿಯಲ್ಲಿ ಕರ್ನಾಟಕದಲ್ಲಿ ಸಚಿವರಾಗಿ




ದ್ದರು. ಲಂಡನ್ ಮಿಷನ್ ಶಾಲೆಯ ವಿದ್ಯಾರ್ಥಿಯಾಗಿದ್ದ ಇವರು ನಂತರ ಮದ್ರಾಸಿನ ಕ್ವೀನ್ ಮೇರಿ ಕಾಲೇಜಿನಲ್ಲಿ ಓದಿದ್ದ ಇವರು ಜವಾಹರಲಾಲ್ ನೆಹರು ಅವರ ಅಡಿಯಲ್ಲಿ ಸಚಿವರಾಗಿದ್ದ ಎಚ್.ಸಿ ದಾಸಪ್ಪ ಅವರನ್ನು ವಿವಾಹವಾದರು. ಈ ದಂಪತಿಗಳ ಕಿರಿಯ ಪುತ್ರ ತುಳಸಿದಾಸ ದಾಸಪ್ಪ ಅವರು ಕೇಂದ್ರ ರಾಜ್ಯ ಸಚಿವರಾಗಿದ್ದರು. ಭಾರತೀಯ ಸ್ವಾತಂತ್ರ್ಯ ಹೋರಾಟದಲ್ಲಿ ಮತ್ತು 1930 ರ ಅರಣ್ಯ ಸತ್ಯಾಗ್ರಹ ಚಳುವಳಿಯಂತಹ ಹಲವಾರು ಸಾಮಾಜಿಕ ಚಳುವಳಿಗಳಲ್ಲಿ ಸಕ್ರಿಯರಾಗಿದ್ದ ಇವರನ್ನು ಆಂದೋಲನವಲ್ಲಿ ಭಾಗವಹಿಸಿದ್ದಕ್ಕಾಗಿ ಜೈಲಿಗೆ ಹಾಕಲಾಯಿತು. ಇವರ ಮನೆಯು ಭೂಗತ ಸತ್ಯಾಗ್ರಹಿ (ಸ್ವಾತಂತ್ರ್ಯ ಸಂಗ್ರಾಮ) ಚಟುವಟಿಕೆಯ ಸಭೆಯಾಗಿತ್ತು. ಸ್ವಾತಂತ್ರ್ಯಕ್ಕಾಗಿ ಆಂದೋಲನ ನಡೆಸುತ್ತಿರುವ ಪ್ರತಿಭಟನಾಕಾರರ ವಿರುದ್ಧ ಕ್ರೂರತನಕ್ಕೆ ಹೆಸರು ವಾಸಿಯಾದ ಹ್ಯಾಮಿಲ್ಟನ್ ಅವರ ಹೆಸರನ್ನು ಕಟ್ಟಡಕ್ಕೆ ಹೆಸರಿಸಲು ನಿರ್ಧರಿಸಿದಾಗ ಅವರು ಸರ್ಕಾರದ ವಿರುದ್ಧ ಅನೇಕ ಆಕ್ರಮಣಕಾರಿ ಭಾಷಣಗಳನ್ನು ನೀಡಿದ್ದ ಹೆಗ್ಗಳಿಕೆ ಇವರದ್ದು. ನಿಜಲಿಂಗಪ್ಪ ಸಚಿವ ಸಂಪುಟದಲ್ಲಿ ಹಿರಿಯ ಸಚಿವೆಯಾಗಿ ಸೇವೆ ಸಲ್ಲಿಸುತ್ತಿದ್ದ ಸಂದರ್ಭದಲ್ಲಿ ಕರ್ನಾಟಕ ರಾಜ್ಯದಲ್ಲಿ ನಿಷೇಧಾಜ್ಞೆ ತೆರವು ಮಾಡಿದ್ದನ್ನು ವಿರೋಧಿಸಿ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿ ಸುದ್ದಿ ಮಾಡಿದ್ದರು. ಭಾರತ ಸರ್ಕಾರವು ಇವರು ಸಮಾಜಕ್ಕೆ ನೀಡಿದ ಕೊಡುಗೆಗಳಿಗಾಗಿ 1972 ರಲ್ಲಿ ಪದ್ಮಭೂಷಣದ ಮೂರನೇ ಅತ್ಯುನ್ನತ ನಾಗರಿಕ ಗೌರವವನ್ನು ನೀಡಿತು. ಅವರು 1980ರಲ್ಲಿ ನಿಧನರಾದರು. ಇಂತಹ ಮಹಾನ್ ಸ್ವಾತಂತ್ರ ಹೋರಾಟಗಾರ್ತಿಗೆ ಅಂತರಾಷ್ಟ್ರೀಯ ಮಹಿಳಾ ದಿನ ಕರಾವಳಿ ತರಂಗಿಣಿ ನಮಿಸುತ್ತಿದೆ.

# ಜೇಬಿಗೆ ಕತ್ತರಿ: ದುಬಾರಿ ಜೀವನ

ಒಂದನೇ ಪುಟದಿಂದ......

ಲಕ್ಷಾಂತರ ಉದ್ಯೋಗಿಗಳು ಹಾಗೂ ವಿದ್ಯಾರ್ಥಿಗಳಿಗೆ ಬಸ್ ಮತ್ತು ಮೆಟ್ರೋ ಪ್ರಯಾಣದ ದರ ಏರಿಕೆ ಗಾಯದ ಮೇಲೆ ಎಳೆದಂತಾಗಿದೆ. ನಗರದ ಸ್ಥಳೀಯ ಸಂಚಾರದಿಂದ ಹಿಡಿದು ದೂರದ ಊರುಗಳ ಪ್ರಯಾಣದವರೆಗೆ ಮಾಸಿಕ ವೆಚ್ಚ ಭಾರಿ ಪ್ರಮಾಣದಲ್ಲಿ ಹೆಚ್ಚಾಗಿದೆ. ಇಂಧನ ವೆಚ್ಚ ಏರಿಕೆಯಿಂದಾಗಿ ಸಾಗಾಣಿಕೆ ದುಬಾರಿಯಾಗಿ, ದಿನಸಿ ವಸ್ತುಗಳು, ಅಡುಗೆ ಎಣ್ಣೆ, ಬೇಳೆಕಾಳು ಹಾಗೂ ತರಕಾರಿಗಳ ಬೆಲೆಯೂ ಆಕಾಶ ಮುಟ್ಟಿದೆ.ಇದರಜೊತೆಗೆ ವಿದ್ಯುತ್ ಸ್ಥಿರ ಶುಲ್ಕಗಳು ಮತ್ತು ನೀರಿನದರ ಹೆಚ್ಚಳದ ಆತಂಕಗಳು ಪ್ರತಿಯೊಂದು ಕುಟುಂಬದ ಬಜೆಟ್ ಅನ್ನು ತಲೆಕೆಳಗಾಗಿಸಿವೆ. ಸ್ಥಿರ ಆದಾಯ ಹೊಂದಿರುವ ಮಧ್ಯಮ ವರ್ಗ ಹಾಗೂ ನಿತ್ಯ ದುಡಿದು ತಿನ್ನುವ ಬಡ ಸಮುದಾಯಗಳ ಉಳಿತಾಯ ಶೂನ್ಯಕ್ಕಿಳಿದು, ಸಾಲದ ಸುಳಿಗೆ ಸಿಲುಕುವ ಪರಿಸ್ಥಿತಿ ನಿರ್ಮಾಣವಾಗಿದೆ. ಸರ್ಕಾರಗಳು ಆಡಳಿತಾತ್ಮಕ ಮತ್ತು ನಷ್ಟ ಭರ್ತಿಯ ಕಾರಣಗಳನ್ನು ನೀಡಬಹುದಾದರೂ, ಅಂತಿಮವಾಗಿ ಬೆಲೆ ಏರಿಕೆಯ ಈ ಏಟಿಗೆ ನಲುಗುತ್ತಿರುವುದು ಮಾತ್ರ ಸಮಾನ್ಯ ನಾಗರಿಕ. ಸರ್ಕಾರವು ತಕ್ಷಣವೇ ಸೂಕ್ತ ಮಾರುಕಟ್ಟೆ ನೀತಿ ರೂಪಿಸಿ, ತೆರಿಗೆಯ ಹೊರೆ ತಗ್ಗಿಸಿ ಜನಸಾಮಾನ್ಯರಿಗೆ ನೆರವಾಗಬೇಕಿದೆ.

# ಬಡತನ ನಿರ್ಮೂಲನೆಯಲ್ಲಿ ಭಾರತ ಹೊಸ ಮೈಲಿಗಲ್ಲು

ಒಂದನೇ ಪುಟದಿಂದ......

(DBT), ಉಚಿತ ಪಡಿತರ ವ್ಯವಸ್ಥೆ ಸೇರಿದಂತೆ ಸರ್ಕಾರದ ಸಾಮಾಜಿಕ ಭದ್ರತಾ ಯೋಜನೆಗಳು ಹಾಗೂ ತಲಾ ಬಳಕೆಯ ವೆಚ್ಚದಲ್ಲಿ ಕಂಡುಬಂದ ಸುಧಾರಣೆಗಳು ಈ ಬೃಹತ್ ಬದಲಾವಣೆಗೆ ಪ್ರಮುಖ ಕಾರಣಗಳಾಗಿವೆ. ಆರ್ಥಿಕ ಅಸಮಾನತೆಯನ್ನು ಅಳೆಯುವ ಗಿನಿ ಸೂಚಿ (Gini Index) ಕೂಡಕಡಿತಗೊಂಡಿದ್ದು, ಭಾರತವು ವೇಗವಾಗಿ ಬಡತನ ನಿರ್ಮೂಲನೆ ಮಾಡುತ್ತಿರುವ ದೇಶಗಳಲ್ಲಿ ಒಂದಾಗಿದೆ ಎಂದು ವಿಶ್ವಬ್ಯಾಂಕ್ ಶ್ಲಾಘಿಸಿದೆ. ಪ್ರಾದೇಶಿಕ ವ್ಯತ್ಯಾಸಗಳು ಹಾಗೂ ಉದ್ಯೋಗ ಸೃಷ್ಟಿಯ ಸವಾಲುಗಳು ಇನ್ನೂ ಅಸ್ತಿತ್ವದಲ್ಲಿದ್ದರೂ, ಈ ಭಾರಿ ಇಳಿಕೆಯು ಭಾರತೀಯ ಆರ್ಥಿಕತೆಯ ಸಕಾರಾತ್ಮಕ ಬೆಳವಣಿಗೆಗೆ ಹಿಡಿದ ಕನ್ನಡಿಯಾಗಿದೆ.

# ಧಮ್ಮಿದ್ದರೆ ನನ್ನೊಂದಿಗೆ ನೇರ ಸಂವಾದಕ್ಕೆ ಬರಲಿ: ಪ್ರಕಾಶ್‌ರೈ

ಒಂದನೇ ಪುಟದಿಂದ......

ಮಾತನಾಡಿದ ಅವರು, ಸಂವಾದದ ವಿಡಿಯೋಗಳನ್ನು ಯಾವುದೇ ಎಡಿಟ್ ಮಾಡದೆ ನೇರವಾಗಿ ಪ್ರಸಾರ ಮಾಡಲಿ ಎಂದು ಆಗ್ರಹಿಸಿದರು. ತಮ್ಮ ಬಳಿಯಿರುವ ದಾಖಲೆಗಳೊಂದಿಗೆ ಸರ್ಕಾರದ ಸುಳ್ಳುಗಳನ್ನು ಸಾಬೀತುಪಡಿಸುವುದಾಗಿ ತಿಳಿಸಿದ ಅವರು, ಮತಗಳವು ವಿಚಾರದಲ್ಲಿತಮ್ಮ ದಾಖಲೆಗಳು ಸುಳ್ಳು ಎಂದು ಸಾಬೀತಾದರೆ ತಾವು ಜೈಲಿಗೆ ಹೋಗಲು ಸಿದ್ಧ, ಇಲ್ಲದಿದ್ದರೆ ಮೋದಿ ಮತ್ತುಅಮಿತ್ ಶಾ ಜೈಲಿಗೆ ಹೋಗಲು ತಯಾರಿದ್ದಾರೆಯೇ ಎಂದು ಪ್ರಶ್ನಿಸಿದರು. ಕರ್ನಾಟಕದಲ್ಲಿ ಎಸ್‌ಐಆರ್ ಜಾರಿಗೆ ತರುವಾಗ ಲಕ್ಷಾಂತರ ನುಸುಳುಕೋರರಿದ್ದಾರೆ ಎಂಬ ಸುಳ್ಳು ಬಿಂಬಿಸಲಾಗಿತ್ತು. ಆದರೆ ಇಡೀ ರಾಜ್ಯದ 5.5 ಕೋಟಿ ಜನಸಂಖ್ಯೆಯಲ್ಲಿ ಪತ್ತೆಯಾಗಿದ್ದು ಕೇವಲ ಒಬ್ಬರು ಪಾಕಿಸ್ತಾನ ಹಾಗೂ ಒಬ್ಬರು ಬಾಂಗ್ಲಾದೇಶ ಮೂಲದ ಮಹಿಳೆ ಮಾತ್ರ. ಅದೂ ಅವರು ಇಲ್ಲಿನವರನ್ನು ಮದುವೆಯಾಗಿ ಬಂದಿದ್ದರು. ಕೇವಲ ಇಬ್ಬರನ್ನು ಪತ್ತೆಹಚ್ಚಲು ಪ್ರಜೆಗಳ ಕೋಟ್ಯಂತರ ರೂಪಾಯಿತೆರಿಗೆ ಹಣ ಪೋಲು ಮಾಡಿ, 5.5 ಕೋಟಿ ಜನರನ್ನು ಗೋಳುಹೊಯ್ದುಕೊಂಡಿದ್ದು ಎಷ್ಟು ಸರಿ ಎಂದು ಅವರು ಖಾರವಾಗಿ ಪ್ರಶ್ನಿಸಿದರು. ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್‌ಕುಮಾರ್ ತಪ್ಪುಗಳ ಮೇಲೆ ತಪ್ಪು ಮಾಡುತ್ತಿದ್ದು, ಅವರ ಅಕ್ರಮಗಳನ್ನು ಮುಚ್ಚಿಹಾಕಲು ಮತ್ತು ಅವರ ಮೇಲೆ ಯಾವ ನ್ಯಾಯಾಲಯವೂ ಕೇಸ್ ದಾಖಲಿಸದಂತೆ ಮಾಡಲು ಡಿಸೆಂಬರ್ 2023 ರಲ್ಲಿ ಸಂಸತ್ತಿನಲ್ಲಿ ವಿಪಕ್ಷ ಸಂಸದರನ್ನು ಅಮಾನತುಗೊಳಿಸಿ 'ನ್ಯಾಯಾಂಗ ವಿನಾಯಿತಿ' (Judicial Immunity) ಕಾನೂನು ತರಲಾಗಿದೆ ಎಂದು ಆರೋಪಿಸಿದರು. ದೇಶದ ರಾಷ್ಟ್ರಪತಿ ಅಥವಾ ಪ್ರಧಾನಮಂತ್ರಿಗೇ ಇಲ್ಲದ ಇಂತಹ ರಕ್ಷಣೆಯನ್ನು ಜ್ಞಾನೇಶ್‌ಕುಮಾರ್‌ಗೆ ನೀಡಲಾಗಿದ್ದು, ತಪ್ಪು ಮಾಡಿದ ಅವರಿಗೆ ಶಿಕ್ಷೆಯಾಗಲೇಬೇಕು ಎಂದು ಆಗ್ರಹಿಸಿದರು. ತಮ್ಮದೇ ವೋಟರ್‌ಐಡಿಯನ್ನು ಸ್ಥಳಾಂತರಗೊಂಡಿದೆ ಎಂಬ ನೆಪದಲ್ಲಿ ತೆಗೆದು ಹಾಕಲು ಯತ್ನಿಸಲಾಗಿತ್ತು ಹಾಗೂ ಫಾರ್ಮ್ 6 ಭರ್ತಿ ಮಾಡಲು ಸೂಚಿಸಲಾಗಿತ್ತು ಎಂದು ಬಹಿರಂಗಪಡಿಸಿದ ಅವರು, ತಾವು ಹೊಸ ಮತದಾರನಲ್ಲದ ಕಾರಣ ಫಾರ್ಮ್ 6 ಭರ್ತಿ ಮಾಡುವುದಿಲ್ಲ ಎಂದು ತಿರಸ್ಕರಿಸಿರುವುದಾಗಿ ಹೇಳಿದರು. ಇಂತಹ ಅಕ್ರಮಗಳ ವಿರುದ್ಧ ಸುಪ್ರೀಂಕೋರ್ಟ್‌ವರೆಗೆ ಕಾನೂನು ಹೋರಾಟ ಮುಂದುವರಿಸುವುದಾಗಿ ಸ್ಪಷ್ಟಪಡಿಸಿದರು. ಇದೇ ವೇಳೆ 90 ಲಕ್ಷ ಮತದಾರರ ಬಗ್ಗೆ ಲೇವಡಿ ಮಾಡಿದ್ದ ಬಿಜೆಪಿ ಮುಖಂಡ ಸಿ.ಟಿ. ರವಿಯವರಿಗೆ ನೇರ ಸವಾಲು ಎಸೆದ ಪ್ರಕಾಶ್‌ರೈ, ಧೈರ್ಯವಿದ್ದರೆ ತಮ್ಮೊಂದಿಗೆ ಚಿಕ್ಕಮಗಳೂರು, ಕೊಡಗು ಸೇರಿದಂತೆ 23 ಜಿಲ್ಲೆಗಳಿಗೆ ಬಂದುಎಸ್‌ಐಆರ್ ಸಂತ್ರಸ್ತರನ್ನು ಭೇಟಿಯಾಗಲಿ ಎಂದರು. ನೂರಾರು ಯುವಕರು 100ಕ್ಕೂ ಹೆಚ್ಚು ಬೂತ್‌ಗಳಲ್ಲಿ ಕೆಲಸ ಮಾಡಿ ಸಂಗ್ರಹಿಸಿರುವ ಸಾಕ್ಷ್ಯಾಧಾರಗಳನ್ನು ಅವರ ಮುಂದಿಡುವುದಾಗಿ ತಿಳಿಸಿದ ಅವರು, ಬೆಂಗಳೂರಿನಲ್ಲಿ ಕೂತು ಮಾತನಾಡುವುದನ್ನು ಬಿಟ್ಟು ನೆಲಮಟ್ಟಕ್ಕೆ ಬಂದು ವಾಸ್ತವ ಸ್ಥಿತಿ ನೋಡಲಿ ಎಂದು ವಾಗ್ದಾಳಿ ನಡೆಸಿದರು.

# ಪ್ರಶಸ್ತಿಗೆ ಅರ್ಜಿ ಆಹ್ವಾನ

ಮಡಿಕೇರಿ : ವಿಕಲಚೇತನರ ಕ್ಷೇತ್ರದಲ್ಲಿ ಗಣನೀಯ ಸೇವೆ ಮಾಡಿದ ಸಂಸ್ಥೆಗಳಿಗೆ, ವಿಶೇಷ ಶಿಕ್ಷಕರಿಗೆ ಮತ್ತು ವೈಯಕ್ತಿಕ ಪ್ರಶಸ್ತಿಗಳನ್ನು ರಾಜ್ಯ ಮಟ್ಟದಲ್ಲಿ ನೀಡಲಾಗುತ್ತಿದೆ. ಈ ಪ್ರಯುಕ್ತ 2026ನೇ ಸಾಲಿನಲ್ಲೂ ಸಹ ಪ್ರಶಸ್ತಿಗಳನ್ನು ನೀಡಲು ಅರ್ಜಿ ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಚೇರಿ ದೂರವಾಣಿ ಸಂಖ್ಯೆ 08272-295829 ನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

# ಅಲ್ಪಸಂಖ್ಯಾತರ ಅರಿವು ಶಿಕ್ಷಣ ಸಾಲ: ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

ಮಂಗಳೂರು – ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ 2026–27ನೇ ಸಾಲಿನ ಅರಿವು ಶಿಕ್ಷಣ ಸಾಲ ಯೋಜನೆಯಡಿ ಮುಸ್ಲಿಂ, ಬೌದ್ಧ, ಜೈನ, ಪಾರ್ಸಿ ಹಾಗೂ ಸಿಖ್ (ಕ್ರೈಸ್ತ ಸಮುದಾಯ ಹೊರತುಪಡಿಸಿ) ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಅರ್ಜಿ ಸಲ್ಲಿಸಲು ನವೆಂಬರ್ 15ರವರೆಗೆ ಅವಧಿ ವಿಸ್ತರಿಸಲಾಗಿದೆ. ಸಿ.ಇ.ಟಿ/ಡಿ–ಸಿ.ಇ.ಟಿ/ಪಿ.ಜಿ–ಸಿ.ಇ.ಟಿ/ನೀಟ್ ಮೂಲಕ ಆಯ್ಕೆಯಾಗಿ ಪದವಿ ಮತ್ತು ಸ್ನಾತಕೋತ್ತರ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅರ್ಹ ವಿದ್ಯಾರ್ಥಿಗಳು ವೆಬ್‌ಸೈಟ್ https://kmdconline.karnataka.gov.in/ ಮೂಲಕ ಅರ್ಜಿ ಸಲ್ಲಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪರಿಶಿಷ್ಟ ಜಾತಿಯವರ ಆರ್ಥಿಕ ಯೋಜನೆಗಳಿಗೆ ಅರ್ಜಿ ಆಹ್ವಾನ

ಮಂಗಳೂರು – 2026–27ನೇ ಸಾಲಿನಲ್ಲಿ ಪರಿಶಿಷ್ಟ ಜಾತಿಯವರ ಆರ್ಥಿಕ ಅಭಿವೃದ್ಧಿಗೆ ವಿವಿಧ ಕಲ್ಯಾಣ ಯೋಜನೆಗಳಿಗೆ ಡಾ.ಬಿ.ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮ, ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮ, ಕರ್ನಾಟಕ ಭೋವಿ ಅಭಿವೃದ್ಧಿ ನಿಗಮ, ಕರ್ನಾಟಕ ತಾಂಡ ಅಭಿವೃದ್ಧಿ ನಿಗಮ ಮತ್ತು ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮಗಳಲ್ಲಿ ಅರ್ಜಿ ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗೆ ನಗರದ ಪಡೀಲ್ ಡಿ.ಸಿ ಕಚೇರಿಯಲ್ಲಿರುವ ಡಾ.ಬಿ.ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರ ಕಛೇರಿ (ದೂ.ಸಂ: 0824–2951814/ 8050854058 ಅಥವಾ ಸಹಾಯವಾಣಿ 9482300400 ಸಂಪರ್ಕಿಸಬಹುದು.

# ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಂದ ಸಾಲ ಪಡೆಯಲು ಆನ್‌ಲೈನ್ ಅರ್ಜಿ ಆಹ್ವಾನ

ಶಿವಮೊಗ್ಗ : ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ವತಿಯಿಂದ 2026–27ನೇ ಸಾಲಿನ 'ಅರಿವು' (ನವೀಕರಣ) ಸಾಲ ಯೋಜನೆಯಡಿ ವಿದ್ಯಾಭ್ಯಾಸ ಸಾಲಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತರು ಅರ್ಜಿಯನ್ನು https://kmdconline.karnataka.gov.in ವೆಬ್‌ಸೈಟ್ ಮೂಲಕ ಆನ್‌ಲೈನ್‌ನಲ್ಲಿ ಭರ್ತಿ ಮಾಡಿ ನಂತರ ಮೂಲ ಇಂಡೆಮ್ನಿಟಿ ಬಾಂಡ್ ಮತ್ತು ಸಾಲಕ್ಕೆ ಸಂಬಂಧಿಸಿದ ಅಗತ್ಯ ದಾಖಲೆಗಳನ್ನು ನವೆಂಬರ್ 15ರೊಳಗಾಗಿ ಸಲ್ಲಿಸುವಂತೆ ಹಾಗೂ ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ : 08182–228262 ನ್ನು ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮೆಟ್ರಿಕ್ ನಂತರದ ಸೌಲಭ್ಯಗಳ ಅರ್ಜಿ ಅವಧಿ ವಿಸ್ತರಣೆ

ಶಿವಮೊಗ್ಗ : ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯು 2026–27ನೇ ಸಾಲಿನಲ್ಲಿ ಮೆಟ್ರಿಕ್ ನಂತರದ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹಾಗೂ ಪ್ರವರ್ಗ–1ರ ಅಲೆಮಾರಿ/ಅರೆಅಲೆಮಾರಿ ಜನಾಂಗದ ವಿದ್ಯಾರ್ಥಿಗಳಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಮೂಲಕ ನೀಡಲಾಗುತ್ತಿರುವ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ, ಶುಲ್ಕ ವಿನಾಯಿತಿ, ವಿದ್ಯಾಸಿರಿ–ಊಟ ಮತ್ತು ವಸತಿ ಸಹಾಯ ಯೋಜನೆ ಸೌಲಭ್ಯಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕವನ್ನು ನವೆಂಬರ್ 30ರವರೆಗೆ ವಿಸ್ತರಿಸಿದೆ. ಹೆಚ್ಚಿನ ಮಾಹಿತಿಗೆ ಇಲಾಖಾ ಸಹಾಯವಾಣಿ ದೂರವಾಣಿ ಸಂಖ್ಯೆ 8050770004 ಅಥವಾ ಇ–ಮೇಲ್ bcwdhelpline@gmail.com ಅನ್ನು ಸಂಪರ್ಕಿಸಬಹುದಾಗಿದೆ.

# ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆಯವರಿಗೆ ಗೌರವಾರ್ಪಣೆ



ಧರ್ಮಸ್ಥಳ : ಅಳಿಕೆ ಸಂಸ್ಥೆಗಳ ಕಾರ್ಯದರ್ಶಿ ಚಂದ್ರಶೇಖರ್ ಭಟ್ ಅವರ ನೇತೃತ್ವದಲ್ಲಿ ಶಿಕ್ಷಕರು ಹಾಗೂ 36 ವಿದ್ಯಾರ್ಥಿಗಳ ನಿಯೋಗವು ಧರ್ಮಸ್ಥಳಕ್ಕೆ ಆಗಮಿಸಿ, ಪೂಜ್ಯ ಹೆಗ್ಗಡೆಯವರನ್ನು ಭೇಟಿಯಾಗಿ ಆದರದಿಂದ ಗೌರವಿಸಿತು. ಧರ್ಮಾಧಿಕಾರಿಗಳ ಸನ್ನಿಧಿಯಲ್ಲಿ ಸಂಸ್ಥೆಯ ಪ್ರತಿನಿಧಿಗಳು ಹಾಗೂ ವಿದ್ಯಾರ್ಥಿಗಳು ಅತ್ಯಂತ ಶ್ರದ್ಧಾ–ಭಕ್ತಿಗಳಿಂದ ಭಾಗವಹಿಸಿದ್ದರು. ಪ್ರಸ್ತಾವಿಕವಾಗಿ ಮಾತನಾಡಿದ ಅಳಿಕೆ ಸಂಸ್ಥೆಗಳ ಕಾರ್ಯದರ್ಶಿ ಚಂದ್ರಶೇಖರ್ ಭಟ್ ಅವರು, ಧರ್ಮಸ್ಥಳ ಹಾಗೂ ಅಳಿಕೆ ಶಿಕ್ಷಣ ಸಂಸ್ಥೆಗಳ ನಡುವೆ ದಶಕಗಳಿಂದಲೂ ಅವಿನಾಭಾವ ಹಾಗೂ ಪವಿತ್ರ ಸಂಬಂಧವಿದೆ ಎಂದರು. ಅಳಿಕೆಯ ವಿದ್ಯಾಸಂಸ್ಥೆಗಳ ಸ್ಥಾಪನೆ, ಬೆಳವಣಿಗೆ ಮತ್ತು ಪ್ರಗತಿಯಲ್ಲಿ ಡಾ. ಡಿ. ವೀರೇಂದ್ರ ಹೆಗ್ಗಡೆಯವರು ನೀಡಿದ ನಿರಂತರ ಬೆಂಬಲ, ಮಾರ್ಗದರ್ಶನ ಹಾಗೂ ಕೊಡುಗೆಯನ್ನು ಅತ್ಯಂತ ಶ್ಲಾಘನೀಯವಾಗಿ ಸ್ಮರಿಸಿ, ಅವರಿಗೆ ಕೃತಜ್ಞತಾಪೂರ್ವಕ ಅಭಿನಂದನೆಗಳನ್ನು ಸಲ್ಲಿಸಿದರು. ಗೌರವಾರ್ಪಣೆಯನ್ನು ಸ್ವೀಕರಿಸಿ ಆಶೀರ್ವಚನ ನೀಡಿದ ಪೂಜ್ಯ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗ್ಗಡೆಯವರು, ಗ್ರಾಮೀಣ ಭಾಗದಲ್ಲಿ ಮೌಲ್ಯಾಧಾರಿತ ಶಿಕ್ಷಣ ನೀಡುವಲ್ಲಿ ಅಳಿಕೆ ಸತ್ಯಸಾಯಿ ಶಿಕ್ಷಣ ಸಂಸ್ಥೆಗಳು ಮಾಡುತ್ತಿರುವ ಸೇವೆ ಹಾಗೂ ಸಾಧನೆಯನ್ನು ಮುಕ್ತಕಂಠದಿಂದ ಶ್ಲಾಘಿಸಿದರು.

# ತುಂಬೆ ಇನ್ಸ್ಟಿಟ್ಯೂಟ್ ಆಫ್ ಆಸ್ತೆಟಿಕ್ಸ್ ಸೇವಾ ವಿಸ್ತರಣೆ



ತುಂಬೆ : ಅಜ್ಮಾನ್‌ನ ತುಂಬೆ ಮೆಡಿಸಿಟಿಯಲ್ಲಿ ನಡೆದ ವಾರ್ಷಿಕ ಅಂತಾರಾಷ್ಟ್ರೀಯ ಸಮ್ಮೇಳನ ಮತ್ತು ಪ್ರಶಸ್ತಿ ಸಮಾರಂಭದಲ್ಲಿ ತುಂಬೆ ಯುನಿವರ್ಸಿಟಿ ಹಾಸ್ಪಿಟಲ್‌ನ ತುಂಬೆ ಇನ್ಸ್ಟಿಟ್ಯೂಟ್ ಆಫ್ ಆಸ್ತೆಟಿಕ್ಸ್ (TIA) ತನ್ನ ಸೇವೆಗಳ ಬೃಹತ್ ವಿಸ್ತರಣೆಯನ್ನು ಘೋಷಿಸಿದೆ. 'ಸೌಂದರ್ಯವರ್ಧಕ ಮತ್ತು ಪ್ಲಾಸ್ಟಿಕ್ ಸರ್ಜರಿಯ ಭವಿಷ್ಯ" ಎಂಬ ಪರಿಕಲ್ಪನೆಯಡಿಯಲ್ಲಿ ಈ ಸಮ್ಮೇಳನ ನಡೆಯಿತು. ಫೆಡರಲ್ ನ್ಯಾಷನಲ್ ಕೌನ್ಸಿಲ್‌ನ ಸದಸ್ಯೆಯಾದ ಗೌರವಾನ್ವಿತ ಆಯಿಷಾ ಇಬ್ರಾಹಿಂ ಅಲ್ ಮರ್ರಿ ಅವರು ಮುಖ್ಯ ಅತಿಥಿಯಾಗಿ ಭಾಗವಹಿಸಿ, ಟಿಐಎನ ಎರಡು ಹೊಸ ಸೇವೆಗಳಾದ 'ಮುಂದಿನ ಪೀಳಿಗೆಯ ಲೇಸರ್ ಹಾಗೂ ಸುಧಾರಿತ ಆಸ್ತೆಟಿಕ್ ತಂತ್ರಜ್ಞಾನ' ಮತ್ತು ಸಂಸ್ಥೆಯ ಸ್ವಂತ ಸ್ಕಿನ್‌ಕೇರ್ ಉತ್ಪನ್ನ 'ಟಿಐಎ ಲಕ್ಸರಿ ಸ್ಕಿನ್ ಕಲೆಕ್ಷನ್' ಅನ್ನು ಬಿಡುಗಡೆ ಮಾಡಿದರು. 2024ರ ಕೊನೆಯಲ್ಲಿ ಪ್ರಾರಂಭವಾದ ಈ ಸಂಸ್ಥೆಯು ಇದುವರೆಗೆ 75,000ಕ್ಕೂ ಹೆಚ್ಚು ಗ್ರಾಹಕರಿಗೆ ಸೇವೆ ನೀಡಿದೆ. ಈ ವರ್ಷ ಪುಜ್ಯೆರಾದ ತುಂಬೆ ಆಸ್ಪತ್ರೆಗೆ ತನ್ನ ಸೇವೆಗಳನ್ನು ವಿಸ್ತರಿಸಿದ್ದು, 'ಟಿಐಎ ವೆಲ್ನೆಸ್ & ಬ್ಯೂಟಿ ಸ್ಟೋರ್' ಹಾಗೂ 'ಬ್ಲೆಂಡ್ಸ್ & ಬ್ರೂಸ್ ನರಿಶ್' ವೆಲ್ನೆಸ್ ಕೆಫೆಯನ್ನು ಆರಂಭಿಸಿದೆ. ಗಲ್ಫ್ ಮೆಡಿಕಲ್ ಯೂನಿವರ್ಸಿಟಿ ಸಹಯೋಗದೊಂದಿಗೆ 20ಕ್ಕೂ ಹೆಚ್ಚು ಪ್ರಮಾಣ ಪತ್ರ ಕೋರ್ಸ್‌ಗಳನ್ನು ನೀಡುತ್ತಿದೆ.

# ನೂತನ ಇವಿ ರೆಟ್ರೋಫಿಟ್ಟಿಂಗ್ ನೂತನ ಕೇಂದ್ರ ಲೋಕಾರ್ಪಣೆ



ಮಂಗಳೂರು : ಪ್ರಸ್ತುತ ಚಾಲ್ತಿಯಲ್ಲಿರುವ ಪೆಟ್ರೋಲ್ ದ್ವಿಚಕ್ರ ವಾಹನಗಳನ್ನು ಎಲೆಕ್ಟ್ರಿಕ್ ಹಾಗೂ ಹೈಬ್ರಿಡ್–ಎಲೆಕ್ಟ್ರಿಕ್ ವಾಹನಗಳನ್ನಾಗಿ ಪರಿವರ್ತಿಸುವಲ್ಲಿ ನಿರತವಾಗಿರುವ ಭಾರತದ ಪ್ರಮುಖ ಎಲೆಕ್ಟ್ರಿಕ್ ಮೊಬಿಲಿಟಿ ತಂತ್ರಜ್ಞಾನ ಸಂಸ್ಥೆ ಗ್ರೀನ್ ಟೈಗರ್ ಮೊಬಿಲಿಟಿ, ಉಡುಪಿಯಲ್ಲಿ ತನ್ನ ನೂತನ ರೆಟ್ರೋಫಿಟ್ಟಿಂಗ್ ಕೇಂದ್ರವನ್ನು ಲೋಕಾರ್ಪಣೆಗೊಳಿಸಿದೆ. ಉಡುಪಿಯ ಕೊರಂಗ್ರಪಾಡಿಯ 76 ಬಡಗುಬೆಟ್ಟುವಿನ ಕ್ರಿಸ್ತ ಜ್ಯೋತಿ ಚರ್ಚ್ ಎದುರಿನ ಐಬಿಸಿ ಟೆಕ್ನಾಲಜೀಸ್‌ನಲ್ಲಿ (ಮನೆ ನಂ. 5–64–ಡಿ) ಈ ಕೇಂದ್ರ ಕಾರ್ಯಾರಂಭ ಮಾಡಿದೆ. ಕಾರ್ಯಕ್ರಮದಲ್ಲಿ ಕರ್ನಾಟಕ ಸರ್ಕಾರದ ಆಹಾರ ಮತ್ತು ನಾಗರಿಕ ಸರಬರಾಜು ಸಚಿವರಾದ ಸನ್ಮಾನ್ಯ ಶ್ರೀ ರಿಜ್ವಾನ್ ಅರ್ಷದ್ ಹಾಗೂ ಉಡುಪಿ ಶಾಸಕರಾದ ಸನ್ಮಾನ್ಯ ಶ್ರೀ ಯಶ್ ಪಾಲ್ ಆನಂದ್ ಸುವರ್ಣ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಗ್ರೀನ್ ಟೈಗರ್ ಮೊಬಿಲಿಟಿಯು ಸಂಪೂರ್ಣ ಸ್ವದೇಶಿ ಹಾಗೂ ಪೇಟೆಂಟ್ ಪಡೆದ ವಿನೂತನ ಇವಿ ರೆಟ್ರೋಫಿಟ್ ತಂತ್ರಜ್ಞಾನ ಪ್ಲಾಟ್‌ಫಾರ್ಮ್ ಅನ್ನು ರೂಪಿಸಿದ್ದು, ಇದು ಗ್ರಾಹಕರು ಈಗಾಗಲೇ ಹೊಂದಿರುವ, ನಂಬಿಕಸ್ಥ ಹಾಗೂ ಚಾಲ್ತಿ ಯಲ್ಲಿರುವ ಪೆಟ್ರೋಲ್ ದ್ವಿಚಕ್ರ ವಾಹನಗಳನ್ನು ಸುಲಭವಾಗಿ ಎಲೆಕ್ಟ್ರಿಕ್ ವಾಹನಗಳನ್ನಾಗಿ ಮಾರ್ಪಡಿಸಿಕೊಳ್ಳಲು ನೆರವಾಗಲಿದೆ.

# ಮಹಾನಗರಪಾಲಿಕೆ ಆಯುಕ್ತರಿಂದ ವಿವಿಧ ಪ್ರದೇಶಗಳ ಭೇಟಿ



ಮಂಗಳೂರು : ಉಳ್ಳಾಲ ಹೊಯ್ಗೆ ಪ್ರದೇಶದಲ್ಲಿ ಹಾನಿಗೊಳಗಾದ ಕಾಲುಸೇತುವೆ ಮತ್ತು ಕುಡಿಯುವ ನೀರಿನ ಸೌಲಭ್ಯಗಳ ಪರಿಶೀಲನೆಗಾಗಿ ಆಯುಕ್ತರು ದೋಣಿಯಲ್ಲಿ ಸಂಚರಿಸಿದರು. ಈ ವೇಳೆ ಸ್ಥಳೀಯ ನಿವಾಸಿಗಳು ಕುಡಿಯುವ ನೀರಿನ ಅಭಾವ, ಪೈಪ್‌ಲೈನ್ ಅಳವಡಿಕೆ, ಬಸ್ ನಿಲ್ದಾಣ ಹಾಗೂ ರಸ್ತೆ ಸೌಕರ್ಯ ಒದಗಿಸುವಂತೆ ಮನವಿ ಸಲ್ಲಿಸಿದರು. ಮುಂಬರುವ ಬೇಸಿಗೆ ಮತ್ತು ಬರಗಾಲದ ಸಾಧ್ಯತೆಯನ್ನು ಗಮನದಲ್ಲಿಟ್ಟುಕೊಂಡು ಕುಡಿಯುವ ನೀರಿನ ಸಮಸ್ಯೆಗೆ ಮೊದಲ ಆದ್ಯತೆ ನೀಡುವುದಾಗಿ ಆಯುಕ್ತರು ಭರವಸೆ ನೀಡಿದರು. ಪೈಪ್‌ಲೈನ್ ಕಾಮಗಾರಿಗೆ ಸಂಬಂಧಿಸಿದಂತೆ ಕನಿಷ್ಠ 50 ನಿವಾಸಿಗಳ ಸಹಿಯೊಂದಿಗಿನ ಮನವಿಯನ್ನು ನವೆಂಬರ್ 4 ರೊಳಗೆ ಪಾಲಿಕೆಗೆ ಸಲ್ಲಿಸಲು ಸೂಚಿಸಿದ್ದು, ಮುಂದಿನ ವಾರದೊಳಗೆ ಟೆಂಡರ್ ಅನುಮೋದನೆ ಪಡೆದು ತುರ್ತು ಕಾಮಗಾರಿ ಆರಂಭಿಸುವುದಾಗಿ ತಿಳಿಸಿದರು. ಬಳಿಕ ಬಜಾಲ್‌ನಲ್ಲಿರುವ ಮಹಾನಗರಪಾಲಿಕೆ ಹಾಗೂ 'ಪ್ಲಾಸ್ಟಿಕ್ ಫಿಶರ್' ಸ್ವಯಂಸೇವಾ ಸಂಸ್ಥೆಯ ಸಹಯೋಗದ ಮೆಟೀರಿಯಲ್ ರಿಕವರಿ ಪ್ಲಾಂಟ್‌ಗೆ ಭೇಟಿ ನೀಡಿ ತ್ಯಾಜ್ಯ ಮರುಬಳಕೆ ಪ್ರಕ್ರಿಯೆಯನ್ನು ವೀಕ್ಷಿಸಿ, ಸಂಸ್ಥೆಗೆ ಅಗತ್ಯ ಬೆಂಬಲ ನೀಡುವ ಭರವಸೆ ಇತ್ತರು. ನಂತರ ಜೆಪ್ಪಿನಮೊಗರು ಕುಡ್ಪಾಡಿ ರಸ್ತೆಯ ರಾಜಕಾಲುವೆಯಲ್ಲಿದ್ದ ಪ್ಲಾಸ್ಟಿಕ್ ತ್ಯಾಜ್ಯ ಸಂಗ್ರಹಣಾ ವ್ಯವಸ್ಥೆಯನ್ನು ಪರಿಶೀಲಿಸಿದರು.

# ಎನ್‌ಐಟಿಕೆಯಲ್ಲಿ ಜೀವವೈವಿಧ್ಯ ಸಂರಕ್ಷಣಾ ಕಾರ್ಯಾಗಾರ



ಸುರತ್ಕಲ್ : ಸುರತ್ಕಲ್‌ನ ರಾಷ್ಟ್ರೀಯ ತಂತ್ರಜ್ಞಾನ ಸಂಸ್ಥೆ ಕರ್ನಾಟಕ (ಎನ್‌ಐಟಿಕೆ) ಆವರಣದ ಸಿಲ್ವರ್ ಜುಬಿಲಿ ಸಭಾಂಗಣದಲ್ಲಿ ಎರಡು ದಿನಗಳ "ಜೀವವೈವಿಧ್ಯ ಸಂರಕ್ಷಣಾ ಕ್ರಿಯೆಗೆ ಭಾವನಾತ್ಮಕ ಪ್ರೇರಕಗಳು" ರಾಷ್ಟ್ರೀಯ ಕಾರ್ಯಾಗಾರವು ಅಧಿಕೃತವಾಗಿ ಆರಂಭವಾಯಿತು. ದೇಶದ ವಿವಿಧ ವಿಶ್ವವಿದ್ಯಾಲಯಗಳಿಂದ ಸುಮಾರು 150 ವಿದ್ಯಾರ್ಥಿಗಳು, ಸಂಶೋಧಕರು ಮತ್ತು ಶಿಕ್ಷಣ ತಜ್ಞರು ಈ ಕಾರ್ಯಾಗಾರದಲ್ಲಿ ಭಾಗವಹಿಸುತ್ತಿದ್ದಾರೆ. ಮಂಗಳೂರು ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಸಿ. ರವಿ ಶಂಕರ್ ಅವರು ಮುಖ್ಯ ಅತಿಥಿಯಾಗಿ ಕಾರ್ಯಾಗಾರವನ್ನು ಉದ್ಘಾಟಿಸಿದರು. ಎನ್‌ಐಟಿಕೆ ನಿರ್ದೇಶಕ ಪ್ರೊ. ಬಿ. ರವಿ ಅವರು ಕಾರ್ಯಾಗಾರದ ಅಧ್ಯಕ್ಷತೆ ವಹಿಸಿದ್ದರು. ಪದ್ಮಶ್ರೀ ಪುರಸ್ಕೃತ ಡಾ. ಉಲ್ಲಾಸ ಕಾರಂತ, ಆಸ್ಟ್ರೇಲಿಯಾದ ನ್ಯೂಕ್ಯಾಸಲ್ ವಿಶ್ವವಿದ್ಯಾಲಯದ ಪ್ರೊ. ಮ್ಯಾಟ್ ಹೇವರ್ಡ್ ಹಾಗೂ ಡಾ. ಆಂಡ್ರಿಯಾ ಗ್ರಿಫಿನ್ ಸೇರಿದಂತೆ ಹಲವು ಗಣ್ಯರು ಈ ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದಾರೆ. ಭಾರತ ಸರ್ಕಾರದ ಶಿಕ್ಷಣ ಸಚಿವಾಲಯದ SPARC ಯೋಜನೆಯಡಿ ಈ ಕಾರ್ಯಾಗಾರವನ್ನು ಆಯೋಜಿಸಲಾಗಿದೆ. ಪರಿಸರ ಮನೋವಿಜ್ಞಾನ ಮತ್ತು ಜೀವವೈವಿಧ್ಯ ಸಂರಕ್ಷಣೆಯನ್ನು ಒಂದೇ ಚರ್ಚೆಯ ವೇದಿಕೆಗೆ ತರುವುದು ಈ ಕಾರ್ಯಾಗಾರದ ಪ್ರಮುಖ ಉದ್ದೇಶವಾಗಿದೆ ಎಂದು ತಿಳಿಸಿದ್ದಾರೆ.

# ಶ್ರೀಮಂತನಾಗಿದ್ದರೆ ಪೊಲೀಸ್ ವ್ಯವಸ್ಥೆ ಹೀಗೆಯೇ ವರ್ತಿಸುತ್ತಿತ್ತೇ : ಕಿಶೋರ್ ಕುಮಾರ್



ಉಡುಪಿ: ಪ್ರೀತಿಯ ಹೆಸರಿನಲ್ಲಿ 8 ವರ್ಷಗಳ ಕಾಲ ಒಡನಾಟವಿಟ್ಟುಕೊಂಡು ನಂತರ ತಿರಸ್ಕರಿಸಿ, ನೆಮ್ಮದಿಯಿಂದ ಬದುಕಲು ಬಿಡಿ ಎಂದು ವಿನಂತಿಸಲು ಹೋದ ಯುವಕನ ಮೇಲೆ ನಡುರಸ್ತೆಯಲ್ಲೇ ಹಾಡುಹಗಲೇ ಬೆನ್ನಿನ ಚರ್ಮ ಸುಲಿಯುವಂತೆ ಅಮಾ ನುಷವಾಗಿ ಹಲ್ಲೆ ನಡೆಸಲಾಗಿತ್ತು. ಈ ಬಗ್ಗೆ ನ್ಯಾಯ ಕೇಳಲು ಹೋದಾಗ ದೂರು ಸ್ವೀಕರಿಸದೆ ಅಮಾನವೀಯವಾಗಿ ನಡೆದುಕೊಂಡ ಪೊಲೀಸ್ ಇಲಾಖೆಯ ನಿರ್ಲಕ್ಷ್ಯದಿಂದಲೇ ಪೆರ್ಡೂರಿನ ಯುವಕ ಪ್ರದೀಪ್ ಪೂಜಾರಿ ಆತ್ಮಹತ್ಯೆ ಮಾಡಿಕೊಳ್ಳುವಂತಾಗಿದೆ ಎಂದು ವಿಧಾನ ಪರಿಷತ್ ಸದಸ್ಯ ಕಿಶೋರ್ ಕುಮಾರ್ ಪುತ್ತೂರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಪೆರ್ಡೂರಿನಲ್ಲಿರುವ ಮೃತ ಪ್ರದೀಪ್ ಪೂಜಾರಿ ಅವರ ನಿವಾಸಕ್ಕೆ ಮಂಗಳವಾರ ಖುದ್ದಾಗಿ ಭೇಟಿ ನೀಡಿದ ಶಾಸಕರು, ಮೃತ ಯುವಕನ ತಾಯಿ ಅಮೃತಾ ಅವರಿಗೆ ಸಾಂತ್ವನ ಹೇಳಿದರು. ಮಗನನ್ನು ಕಳೆದುಕೊಂಡು ಕಣ್ಣೀರಿಡುತ್ತಿದ್ದ ತಾಯಿಯ ಆಕ್ರಂದನ ಹಾಗೂ ದುಃಖವನ್ನು ನೋಡಲು ಸಾಧ್ಯವಾಗುತ್ತಿಲ್ಲ, ಇಡೀ ಮನೆಯ ವಾತಾವರಣ ಮನಕಲ ಕುವಂತಿದೆ ಎಂದು ಶಾಸಕರು ಭಾವುಕರಾದರು. ಆ ಕುಟುಂಬದಲ್ಲಿ ಬಡತನ ಎದ್ದು ಕಾಣುತ್ತಿದ್ದು, ಪ್ರದೀಪ್ ಒಬ್ಬ ಕಟ್ಟಾಬಡ ಕುಟುಂಬದ ಯುವಕ ಹಾಗೂ ಬಡ ಕಾರ್ಯಕರ್ತನಾಗಿದ್ದ ಕಾರಣಕ್ಕಾಗಿಯೇ ಇಡೀ ವ್ಯವಸ್ಥೆ ಆತನನ್ನು ಕೀಳಾಗಿ ಕಂಡಿತೇ ಎಂಬ ನೋವು ಕಾಡುತ್ತಿದೆ ಎಂದು ಶಾಸಕರು ಹೇಳಿದರು.

# ಕರಾವಳಿ ಸರ್ಕಲ್–ಪಂಪ್‌ವೆಲ್ ರಸ್ತೆ ಕಾಮಗಾರಿ ಪೂರ್ಣ




ಮಂಗಳೂರು : ಮಂಗಳೂರು ನಗರದ ಕರಾವಳಿ ಸರ್ಕಲ್‌ನಿಂದ ಪಂಪ್‌ವೆಲ್‌ವರೆಗಿನ ರಸ್ತೆಯ ಕಾಂಕ್ರೀಟೀಕರಣ ಕಾಮಗಾರಿ ಪೂರ್ಣಗೊಂಡಿದೆ. ಲೋಕೋಪಯೋಗಿ ಇಲಾಖೆಯ ವತಿಯಿಂದ ಸುಮಾರು 4 ಕೋಟಿ ವೆಚ್ಚದಲ್ಲಿ ಈ ರಸ್ತೆಯನ್ನು ಅಭಿವೃದ್ಧಿಪಡಿಸಲಾಗಿದೆ. ಇಂದು ವಿಧಾನ ಪರಿಷತ್ ಶಾಸಕ ಐವನ್ ಡಿ'ಸೋಜಾ ಅವರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಬಾಕಿ ಉಳಿದಿರುವ ವಿದ್ಯುತ್ ದೀಪ ಹಾಗೂ ಇಂಟರ್‌ಲಾಕ್ ಕಾಮಗಾರಿಗಳನ್ನು 40 ಲಕ್ಷ ವೆಚ್ಚದಲ್ಲಿ ಶೀಘ್ರ ಪೂರ್ಣಗೊಳಿಸಲು ಕ್ರಮ ಕೈಗೊಳ್ಳುವುದಾಗಿ ತಿಳಿಸಿದ್ದಾರೆ. ಹಾಗೆಯೇ, ಬಲ್ಮಠದಿಂದ ಕಂಕನಾಡಿ ಕರಾವಳಿ ಸರ್ಕಲ್‌ವರೆಗಿನ ರಸ್ತೆ ಅಭಿವೃದ್ಧಿಯನ್ನು ಮಹಾತ್ಮ ಗಾಂಧಿ ಯೋಜನೆಯಡಿ 1.21 ಕೋಟಿ ವೆಚ್ಚದಲ್ಲಿ ಕೆಲವೇ ದಿನಗಳಲ್ಲಿ ಆರಂಭಿಸಲಾಗುವುದು ಎಂದು ಹೇಳಿದ್ದಾರೆ. ಮಂಗಳೂರು ನಗರದ 60 ವಾರ್ಡ್‌ಗಳ ಸಮಗ್ರ ಅಭಿವೃದ್ಧಿಗಾಗಿ ಸುಮಾರು 400 ಕೋಟಿ ಅನುದಾನದಲ್ಲಿ ವಿವಿಧ ಕಾಮಗಾರಿಗಳನ್ನು ಕೈಗೊಳ್ಳಲು ನಿರ್ಧರಿಸಲಾಗಿದ್ದು, ಶೀಘ್ರದಲ್ಲೇ ಟೆಂಡರ್ ಪ್ರಕ್ರಿಯೆ ಆರಂಭವಾಗಲಿದೆ ಎಂದು ಅವರು ತಿಳಿಸಿದ್ದಾರೆ.

# IMU ಉಪಕುಲಪತಿಯಾಗಿ ಡಾ. ವೆಂಕಟರಮಣ ಅಕ್ಕರಾಜು



ಮಂಗಳೂರು : ಭಾರತ ಸರ್ಕಾರದ ಪ್ರತಿಷ್ಠಿತ ಕೇಂದ್ರೀಯ ವಿಶ್ವವಿದ್ಯಾಲಯವಾದ 'ಇಂಡಿಯನ್ ಮಾರಿಟೈಮ್ ಯೂನಿವರ್ಸಿಟಿ' (IMU) ಉಪಕುಲಪತಿಯಾಗಿ ಡಾ. ವೆಂಕಟರಮಣ ಅಕ್ಕರಾಜು ಅವರನ್ನು ಮಾನ್ಯ ಭಾರತದ ರಾಷ್ಟ್ರಪತಿಗಳು ನೇಮಕ ಮಾಡಿದ್ದಾರೆ. ಕೇಂದ್ರ ಸರ್ಕಾರದ ಕಾರ್ಯದರ್ಶಿ ಹಂತದ ಹುದ್ದೆಗೆ ಸಮಾನವಾದ ಈ ಜವಾಬ್ದಾರಿಯು ದೇಶದ ಕಡಲ ಶಿಕ್ಷಣ ಹಾಗೂ ಬಂದರು ಕ್ಷೇತ್ರದಲ್ಲಿ ಅವರ ಸುದೀರ್ಘ ಕೊಡುಗೆಗೆ ಸಿಕ್ಕ ಗೌರವವಾಗಿದೆ. ಡಾ. ವೆಂಕಟರಮಣ ಅಕ್ಕರಾಜು ಅವರು ಬಂದರು ಮತ್ತು ನೌಕಾಯಾನ ಕ್ಷೇತ್ರದಲ್ಲಿ ಅಪಾರ ಅನುಭವ ಹೊಂದಿರುವ ಹೆಸರಾಂತ ತಜ್ಞರಾಗಿದ್ದಾರೆ. ಇವರು 2018 ರಿಂದ 2025 ರವರೆಗೆ ನ್ಯೂ ಮಂಗಳೂರು ಪೋರ್ಟ್ ಅಥಾರಿಟಿ (NMPA) ಅಧ್ಯಕ್ಷರಾಗಿ ಯಶಸ್ವಿ ಸೇವೆ ಸಲ್ಲಿಸಿದ್ದಾರೆ. ಇದಕ್ಕೂ ಮುನ್ನ 2016ರಿಂದ 2018ರವರೆಗೆ ಕೊಚ್ಚಿನ್ ಪೋರ್ಟ್ ಅಥಾರಿಟಿಯ ಅಧ್ಯಕ್ಷರಾಗಿ ಹಾಗೂ 2022ರಿಂದ 2023ರವರೆಗೆ ಗೋವಾ ಪೋರ್ಟ್ ಅಥಾರಿಟಿಯ ಅಧ್ಯಕ್ಷರಾಗಿ ಹೆಚ್ಚುವರಿ ಜವಾಬ್ದಾರಿ ನಿರ್ವಹಿಸಿದ್ದರು.

# ರಾಜ್ಯ ಮಟ್ಟದ ಖೋ–ಖೋದಲ್ಲಿ ಆಳ್ವಾಸ್ ತಂಡಕ್ಕೆ ಚಾಂಪಿಯನ್ ಪಟ್ಟ



ಮೂಡಬಿದಿರೆ : ಬೆಂಗಳೂರು ಕೇಂದ್ರ ಶೈಕ್ಷಣಿಕ ಜಿಲ್ಲೆಯ ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಹಾಗೂ ದೊಡ್ಡಕನ್ನಲ್ಲಿಯ ಸಿಆರ್‌ಆರ್ ಪದವಿಪೂರ್ವ ಕಾಲೇಜಿನ ಜಂಟಿ ಆಶ್ರಯದಲ್ಲಿ ನಡೆದ ಪದವಿಪೂರ್ವ ಕಾಲೇಜುಗಳ ರಾಜ್ಯ ಮಟ್ಟದ ಬಾಲಕಿಯರ ಖೋ–ಖೋ ಪಂದ್ಯಾವಳಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯನ್ನು ಪ್ರತಿನಿಧಿಸಿದ್ದ ಮೂಡುಬಿದಿರೆಯ ಆಳ್ವಾಸ್ ಪದವಿ ಪೂರ್ವ ಕಾಲೇಜಿನ ಬಾಲಕಿಯರ ತಂಡವು ಭರ್ಜರಿ ಜಯ ಸಾಧಿಸಿ ಚಾಂಪಿಯನ್ ಆಗಿ ಹೊರಹೊಮ್ಮಿದೆ. ಅಂತಿಮ ಫೈನಲ್ ಹಣಾಹಣಿಯಲ್ಲಿ ಮಂಡ್ಯ ಜಿಲ್ಲೆಯ ತಂಡವನ್ನು ಪರಾಭವಗೊಳಿಸಿದ ಆಳ್ವಾಸ್ ಕಾಲೇಜು ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿತು. ಪಂದ್ಯಾವಳಿಯ ವೈಯಕ್ತಿಕ ವಿಭಾಗದಲ್ಲಿ ಆಳ್ವಾಸ್ ಕಾಲೇಜಿನ ಲಾವಣ್ಯ 'ಉತ್ತಮ ಹಿಡಿತಗಾರ್ತಿ' ಹಾಗೂ ವಿಜಯಲಕ್ಷ್ಮಿ 'ಉತ್ತಮ ಓಟಗಾರ್ತಿ' ಬಹುಮಾನಗಳನ್ನು ಪಡೆದುಕೊಂಡರು. ರಾಜ್ಯ ಮಟ್ಟದಲ್ಲಿ ಅತ್ಯುತ್ತಮ ಸಾಧನೆಗೈದು ಪ್ರಶಸ್ತಿ ಮುಡಿಗೇರಿಸಿಕೊಂಡ ವಿಜೇತ ಕ್ರೀಡಾಪಟುಗಳನ್ನು ಆಳ್ವಾಸ್ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಡಾ.ಎಂ.ಮೋಹನ ಆಳ್ವ ಅಭಿನಂದಿಸಿದ್ದಾರೆ.

# ಸುದ್ದಿ ತುಣುಕು

ಭಾರತೀಯ ಚಿತ್ರರಂಗದ ಬಹುನಿರೀಕ್ಷಿತ 'ರಾಮಾಯಣ' ಚಿತ್ರ ಇಂದು ಅದ್ಧೂರಿಯಾಗಿ ವಿಶ್ವಾದ್ಯಂತ ಬಿಡುಗಡೆಯಾಗಿದೆ. ರಾಜ್ಯದ ಚಿತ್ರಮಂದಿರಗಳಲ್ಲೂ ಅಭಿಮಾನಿಗಳಲ್ಲಿ ಸಂಭ್ರಮಾಚರಣೆ ಜೋರಾಗಿದೆ.

ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಹಳ್ಳಿ ಗುಗ್ಗು ಎಂಬ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಹೇಳಿಕೆಗೆ ಜೆಡಿಎಸ್ ಶಾಸಕರು, 'ಗೃಹ ಸಚಿವರೇ ನಾವು ಹಳ್ಳಿ ಗುಗ್ಗು ಏನೀವಾಗ' ಎಂದು ಪ್ರಶ್ನಿಸುವ ಪೋಸ್ಟರ್ ಮೂಲಕ ತಿರುಗೇಟು ನೀಡಿದ್ದಾರೆ.

ಡಿ ಕೆ ಶಿವಕುಮಾರ್ ಅವರು ಸಿಎಂ ಆದ ಬಳಿಕ ಇದೇ ಮೊದಲ ಬಾರಿಗೆ ರೇಶ್ಮೆ ನಗರಿ ರಾಮನಗರಕ್ಕೆ ಆಗಮಿಸುತ್ತಿದ್ದು, ಇದಕ್ಕಾಗಿ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ.

ನಂಜನಗೂಡು ತಾಲೂಕಿನ ಆಕಳ ಗ್ರಾಮದ ಸುತ್ತಮುತ್ತ ಡ್ರೋನ್ ಕ್ಯಾಮರಾದಲ್ಲಿ ಒಂದೇ ಬಾರಿಗೆ ನಾಲ್ಕು ಹುಲಿಗಳು ಕಾಣಿಸಿಕೊಂಡಿದ್ದು, ಗ್ರಾಮಸ್ಥರಲ್ಲಿ ಆತಂಕವನ್ನುಂಟು ಮಾಡಿದೆ.

ಕಬ್ಬಿಗೆ 1 ಸಾವಿರ ರೂ. ಪ್ರೋತ್ಸಾಹಧನ ನೀಡುವಂತೆ ಒತ್ತಾಯಿಸಿ ಬೆಳಗಾವಿ ತಾಲೂಕಿನ ಮುಕ್ತಿ ಮಠದಿಂದ ಬೆಳಗಾವಿವರೆಗೆ ಪಾದಯಾತ್ರೆಗೆ ಮುಂದಾಗಿದ್ದ ರೈತರನ್ನು ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ.

ವಿಜಯನಗರದಲ್ಲಿ ಕುರಿಗಾಯಿ ಮಹಿಳೆಯರ ಸಮಸ್ಯೆಗಳಿಗೆ ಸ್ಪಂದಿಸದ ಅಧಿಕಾರಿಗಳ ವಿರುದ್ಧ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮಿ ಚೌಧರಿ ಅಸಮಾಧಾನ ವ್ಯಕ್ತಪಡಿಸಿ, ಸ್ಥಳದಲ್ಲೇ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿರುವ ಹಿನ್ನೆಲೆಯಲ್ಲಿ ನವೆಂಬರ್ 1ರಂದು ಹು-ಧಾ ಪಾಲಿಕೆಯಿಂದ ಸಮಾರಂಭ ಆಯೋಜಿಸಲು ಸಾಧ್ಯವಾಗಿರಲಿಲ್ಲ. ಇದೀಗ 17,18ರಂದು ಅದ್ದೂರಿ ಆಚರಣೆ ತಯಾರಿ ಮಾಡಿಕೊಳ್ಳುತ್ತಿದೆ.

ಟನ್ ಕಬ್ಬಿಗೆ 3,600 ರೂಪಾಯಿ ದರ ನೀಡಲು ಕಾರ್ಖಾನೆ ಮಾಲೀಕರು ಒಪ್ಪಿಕೊಂಡಿದ್ದಾರೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ತಿಳಿಸಿದ್ದಾರೆ.

ರಾಜ್ಯದಲ್ಲಿ ಅವಧಿ ಮುಗಿದು ಚುನಾವಣೆ ನಡೆಯಬೇಕಿರುವ ಮಹಾನಗರ ಪಾಲಿಕೆ, ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿಗಳ ವಾರ್ಡ್‌ವಾರು ಮೀಸಲಾತಿ ನಿಗದಿಗೆ ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿದೆ ಎಂದು ಸರ್ಕಾರ ಹೈಕೋರ್ಟ್‌ಗೆ ಮಾಹಿತಿ ನೀಡಿದೆ.

ಕಬ್ಬಿಗೆ ಸೂಕ್ತ ಬೆಲೆ ಈವರೆಗೂ ನಿರ್ಧಾರ ಆಗದ ಹಿನ್ನೆಲೆಯಲ್ಲಿ ರೈತರ ಹೋರಾಟ ತೀವ್ರ ಸ್ವರೂಪ ಪಡೆದುಕೊಂಡಿದ್ದು, ಬೆಳಗಾವಿ ಜಿಲ್ಲೆಯಲ್ಲಿ ಜೈಲ್ ಭರೋ ಚಳವಳಿ ಮುಂದುವರೆದಿದೆ.

ಚಾಮರಾಜನಗರದ ಜೆಎಸ್‌ಎಸ್ ಕಾಲೇಜು ಆವರಣದಲ್ಲಿ ಸಂಘಸಂಸ್ಥೆಗಳು, ಭಕ್ತವೃಂದದ ವತಿಯಿಂದ ಡಾ.ಶಿವರಾತ್ರಿ ರಾಜೇಂದ್ರ ಸ್ವಾಮೀಜಿ 111 ನೇ ಜಯಂತ್ಯುತ್ಸವ ವಿಜೃಂಭಣೆಯಿಂದ ಜರುಗಿತು.

ಕೌಶಲ್ಯಾಭಿವೃದ್ಧಿ ಮೂಲಕ ಯುವಜನತೆಗೆ ಉದ್ಯೋಗಾವಕಾಶ ಕಲ್ಪಿಸಲು ಕರ್ನಾಟಕ ಸರ್ಕಾರದಿಂದ ಉದ್ಯೋಗ ಸೇತು ಯೋಜನೆ ಜಾರಿ. 7 ವರ್ಷಗಳಲ್ಲಿ 30 ಲಕ್ಷ ಉದ್ಯೋಗ ಸೃಷ್ಟಿ ಗುರಿ.

ಸಮುದ್ರದಲ್ಲಿ ಅಲೆಗಳ ಸ್ವರೂಪ, ನೀರಿನ ಆಳದ ಅರಿವಿಲ್ಲದೆ ಕಡಲಿಗಿಳಿದು ಪ್ರವಾಸಿಗರು ಸಾವನ್ನಪ್ಪುತ್ತಿರುವ ಘಟನೆಗಳು ಹೆಚ್ಚುತ್ತಿದ್ದು, ಉತ್ತರ ಕನ್ನಡ ಜಿಲ್ಲಾ ಪೊಲೀಸ್ ಇಲಾಖೆ ಸುರಕ್ಷತಾ ಕ್ರಮಗಳನ್ನು ಜಾರಿಗೊಳಿಸಿದೆ.

ಅಗ್ನಿಪಥ್ ಯೋಜನೆಯಲ್ಲಿ ಕೇಂದ್ರ ಸರ್ಕಾರವು ಮಹತ್ವದ ನಿರ್ಧಾರ ತೆಗೆದುಕೊಂಡಿದೆ. ನಾಲ್ಕು ವರ್ಷಗಳ ನಂತರ ಸೇನೆಯಿಂದ ನಿರ್ಗಮಿಸಬೇಕಿದ್ದ ಅಗ್ನಿವೀರರ ಸೇವಾವಧಿಯನ್ನು 2 ವರ್ಷ ವಿಸ್ತರಿಸಿದೆ.

ಒಡಿಶಾದ ಚಾಂದಿಪುರ ರಕ್ಷಣಾ ವಲಯದಲ್ಲಿ ಕ್ಷಿಪಣಿ ಉಡಾವಣೆ ಪರೀಕ್ಷೆ ನಡೆಯುತ್ತಿದ್ದು, ಆ ವ್ಯಾಪ್ತಿಯ ಹಳ್ಳಿಗಳ ಜನರನ್ನು ಸ್ಥಳಾಂತರ ಮಾಡಲಾಗಿದೆ.

# ಬೇಸನ್ ಲಾಡು



**ಬೇಕಾಗುವ ಸಾಮಗ್ರಿಗಳು :**

ಕಡಲೆ ಹಿಟ್ಟು – 1 ಕಪ್

ಪುಡಿ ಸಕ್ಕರೆ – ಅರ್ಧ ಕಪ್

ತುಪ್ಪ – ಅರ್ಧ ಕಪ್

ಗೋಡಂಬಿ – ಅರ್ಧ ಕಪ್

ಏಲಕ್ಕಿ ಪುಡಿ – ಅರ್ಧ ಚಮಚ

**ಮಾಡುವ ವಿಧಾನ :**

ಮೊದಲು ಕಡಲೆ ಹಿಟ್ಟನ್ನು ಹುರಿದುಕೊಂಡು ಪಕ್ಕದಲ್ಲಿಡಿ. ನಂತರ ಪಾತ್ರೆಯಲ್ಲಿ ಒಂದು ಚಮಚದಷ್ಟು ತುಪ್ಪದಲ್ಲಿ ಕತ್ತರಿಸಿದ ಗೇರುಬೀಜವನ್ನು ಹಾಕಿ ಹುರಿದುಕೊಳ್ಳಬೇಕು ಈಗ ಪಾತ್ರೆಯಲ್ಲಿ ತುಪ್ಪವನ್ನು ಹಾಕಿ ಬಿಸಿ ಮಾಡಿಕೊಂಡು ಹುರಿದ ಕಡಲೆ ಹಿಟ್ಟನ್ನು ಹಾಕಿ ಚೆನ್ನಾಗಿ ಹುರಿಯಬೇಕು. ಇದಕ್ಕೆ ಏಲಕ್ಕಿ ಪುಡಿ ಸೇರಿಸಿ ಮಿಶ್ರ ಮಾಡಿಕೊಂಡು, ಗ್ಯಾಸ್ ಆರಿಸಿ ಈ ಮಿಶ್ರಣಕ್ಕೆ ಸಕ್ಕರೆ ಪುಡಿ, ಗೋಡಂಬಿ, ತುಪ್ಪವನ್ನು ಹಾಕಿ ಚೆನ್ನಾಗಿ ಮಿಶ್ರ ಮಾಡಿಕೊಂಡು ಬಳಿಕ ಇದನ್ನು ಒಂದು ಪಾತ್ರೆಗೆ ವರ್ಗಾಯಿಸಿ, ಕೈಗಳಿಗೆ ಸ್ವಲ್ಪ ತುಪ್ಪ ಹಚ್ಚಿಕೊಂಡು ಹಿಟ್ಟಿನಿಂದ ಲಾಡಿನ ಉಂಡೆಗಳನ್ನು ಕಟ್ಟಲು ಪ್ರಾರಂಭಿಸಿದರೆ ರುಚಿಯಾದ ಬೇಸನ್ ಲಾಡು ಸವಿಯಲು ಸಿದ್ಧವಾಗುತ್ತದೆ.

# ಅಮೆರಿಕ ಮಧ್ಯಂತರ ಚುನಾವಣೆ



ಅಮೆರಿಕ : ಅಮೆರಿಕದ ಮಧ್ಯಂತರ ಚುನಾವಣೆಯಲ್ಲಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ರಿಪಬ್ಲಿಕನ್ ಪಕ್ಷಕ್ಕೆ ಭಾರಿ ಹಿನ್ನಡೆಯಾಗಿದ್ದು, ಪ್ರಮುಖ ಸ್ವಿಂಗ್ ಸ್ಟೇಟ್ ಎನಿಸಿಕೊಂಡಿರುವ ಮಿಚಿಗನ್ ರಾಜ್ಯದ ಸೆನೆಟ್ ಸ್ಥಾನಕ್ಕೆ ಡೆಮಾಕ್ರಟಿಕ್ ಪಕ್ಷದ ಅಭ್ಯರ್ಥಿ ಅಬ್ದುಲ್ ಎಲ್ ಸಯೀದ್ ಅವರು ಆಯ್ಕೆಯಾಗಿದ್ದಾರೆ. ಈ ಗೆಲುವಿನೊಂದಿಗೆ ಅಮೆರಿಕದ ರಾಜಕೀಯ ಇತಿಹಾಸದಲ್ಲೇ ಸೆನೆಟ್‌ಗೆ ಆಯ್ಕೆಯಾದ ಮೊದಲ ಮುಸ್ಲಿಂ ವ್ಯಕ್ತಿ ಎಂಬ ಹೆಗ್ಗಳಿಕೆಗೆ ಅವರು ಪಾತ್ರರಾಗಿದ್ದು, ಹಲವು ಹೊಸ ದಾಖಲೆಗಳಿಗೆ ಈ ಫಲಿತಾಂಶ ಸಾಕ್ಷಿಯಾಗಿದೆ.

# ಅಜಿತ್ ದೋವಲ್ ವಿಯೆಟ್ನಾಂ ಪ್ರವಾಸ



ವಿಯೆಟ್ನಾಂ : ಭಾರತದ ರಾಷ್ಟ್ರೀಯ ಭದ್ರತಾ ಸಲಹೆಗಾರರಾದ ಅಜಿತ್ ದೋವಲ್ ಅವರು ವಿಯೆಟ್ನಾಂ ಪ್ರವಾಸ ಕೈಗೊಂಡಿದ್ದು, ದ್ವಿಪಕ್ಷೀಯ ಭದ್ರತೆ ಮತ್ತು ರಕ್ಷಣಾ ಸಹಕಾರವನ್ನು ಬಲಪಡಿಸುವ ನಿಟ್ಟಿನಲ್ಲಿ ಮಹತ್ವದ ಮಾತುಕತೆ ನಡೆಸಿದ್ದಾರೆ. ಈ ಅಧಿಕೃತ ಪ್ರವಾಸದ ಭಾಗವಾಗಿ ಅವರು ಹನೋಯಿಯಲ್ಲಿರುವ ಐತಿಹಾಸಿಕ ಬೌದ್ಧ ದೇಗುಲವಾದ ಕ್ವಾನ್ ಸು ಪಗೋಡಾಗೆ ಭೇಟಿ ನೀಡಿ ವಿಶೇಷ ಪ್ರಾರ್ಥನೆ ಸಲ್ಲಿಸಿದರು.

# ದಕ್ಷಿಣ ಉಕ್ರೇನ್‌ನಲ್ಲಿ ರಷ್ಯಾ ಭೀಕರ ಬಾಂಬ್ ದಾಳಿ



ಕೀವ್: ದಕ್ಷಿಣ ಉಕ್ರೇನ್ ಮೇಲೆ ರಷ್ಯಾ ಸೇನೆ ಸೋಮವಾರ ಭೀಕರ ಬಾಂಬ್ ದಾಳಿ ನಡೆಸಿದ್ದು, ಮಾನವೀಯ ನೆರವು ವಿತರಣಾ ಕೇಂದ್ರ ಹಾಗೂ ಅದರ ಪಕ್ಕದಲ್ಲಿದ್ದ ತಾತ್ಕಾಲಿಕ ಆಶ್ರಯ ತಾಣ ಸಂಪೂರ್ಣವಾಗಿ ನಾಶವಾಗಿದೆ. ಈ ಭೀಕರ ದಾಳಿಯಲ್ಲಿ ಕನಿಷ್ಠ 26 ಮಂದಿ ನಾಗರಿಕರು ಉಸಿರು ಚೆಲ್ಲಿದ್ದು, 27ಕ್ಕೂ ಹೆಚ್ಚು ಜನರು ಕಾಣೆಯಾಗಿದ್ದಾರೆ ಎಂದು ಉಕ್ರೇನಿಯನ್ ಅಧಿಕಾರಿಗಳು ಖಚಿತಪಡಿಸಿದ್ದಾರೆ. ದಕ್ಷಿಣ ಉಕ್ರೇನ್‌ನ ಝುಪೊರಿಝಿಯಾ ಪ್ರದೇಶದ ಕೊಮಿಶುವಖಾ ಗ್ರಾಮದಲ್ಲಿ ಈ ವಿನಾಶಕಾರಿ ದಾಳಿ ಸಂಭವಿಸಿದೆ.

# ಜರ್ಮನಿಯಲ್ಲಿ ಉಗ್ರ ಸ್ವರೂಪದ ಜೆನ್ ಜಿ ಪ್ರತಿಭಟನೆ



ಜರ್ಮನಿ : ಯುರೋಪ್ ಖಂಡದ ಪ್ರಮುಖ ದೇಶವಾದ ಜರ್ಮನಿಯು 'ಜೆನ್ ಜಿ' (Gen Z) ಯುವಜನರ ಬೃಹತ್ ಹೋರಾಟದಿಂದಾಗಿ ತೀವ್ರ ಸಂಕಷ್ಟಕ್ಕೆ ಸಿಲುಕಿದೆ. ದೇಶದ ಆರ್ಥಿಕ ಕೇಂದ್ರವೆನಿಸಿದ ಫ್ರಾಂಕ್‌ಫರ್ಟ್ ನಗರದಲ್ಲಿ ಸನ್ನಿವೇಶವು ಅತ್ಯಂತ ಭೀಕರ ಹಾಗೂ ನಿಯಂತ್ರಣ ತಪ್ಪಿದ ಹಂತಕ್ಕೆ ತಲುಪಿದ್ದು, ನಗರದಾದ್ಯಂತ ವ್ಯಾಪಕ ಹಿಂಸಾಚಾರ ವರದಿಯಾಗಿದೆ. ಆರಂಭದಲ್ಲಿ ಶಾಂತಿಯುತವಾಗಿದ್ದ ಯುವಕರ ಪ್ರತಿಭಟನಾ ಮೆರವಣಿಗೆಯ ದುರುಪಯೋಗ ಪಡೆದುಕೊಂಡ ಮುಸುಕುಧಾರಿ ಗಲಭೆಕೋರರು, ಸಂಜೆಯಾಗುತ್ತಿದ್ದಂತೆ ರಸ್ತೆಗಿಳಿದು ಹಿಂಸಾಚಾರ ನಡೆಸಿದ್ದಾರೆ.

# ಭಾರತ–ನೇಪಾಳ ಗಡಿಯಲ್ಲಿ ರೆಡ್ ಅಲರ್ಟ್



ನೇಪಾಳ : ನೇಪಾಳದಲ್ಲಿ ನಡೆದ ಎರಡು ಪ್ರತ್ಯೇಕ ಹಾಗೂ ಗಂಭೀರ ಘಟನೆಗಳು ಭಾರತ–ನೇಪಾಳ ಗಡಿಯಲ್ಲಿ ತೀವ್ರ ಆತಂಕಕ್ಕೆ ಕಾರಣವಾಗಿವೆ. ನೇಪಾಳದ ಕರ್ನಾಲಿ ಪ್ರಾಂತ್ಯಕ್ಕೆ ಸೇರಿದ ಡೊಲ್ಪಾ ಜಿಲ್ಲಾ ಜೈಲಿನಿಂದ ಎಂಟು ಮಂದಿ ಕೈದಿಗಳು ಸುರಂಗ ತೋಡಿ ಪರಾರಿಯಾಗಿರುವ ಘಟನೆ ಹಾಗೂ ಅದರ ಬೆನ್ನಲ್ಲೇ ಬಿಹಾರಕ್ಕೆ ಹೊಂದಿಕೊಂಡಂತಿರುವ ಬಿರಾತ್ ನಗರದಲ್ಲಿ ನಡೆದ ಶಂಕಿತ ಬಾಂಬ್ ಸ್ಫೋಟದಿಂದಾಗಿ ಎರಡೂ ದೇಶಗಳ ಗಡಿ ಭಾಗದಲ್ಲಿ ಹೈಅಲರ್ಟ್ ಘೋಷಿಸಲಾಗಿದೆ.

# ಬಾಂಗ್ಲಾದೇಶದಲ್ಲಿ ಭುಗಿಲೆದ್ದ ಬೃಹತ್ ಪ್ರತಿಭಟನೆ



ಢಾಕ : ಬಾಂಗ್ಲಾದೇಶದಲ್ಲಿ ಪ್ರಧಾನಿ ತಾರಿಕ್ ರೆಹಮಾನ್ ನೇತೃತ್ವದ ಆಡಳಿತಾರೂಢ ಸರ್ಕಾರದ ವಿರುದ್ಧ ನ್ಯಾಷನಲ್ ಸಿಟಿಜನ್ ಪಾರ್ಟಿ ಢಾಕಾದಲ್ಲಿ ಬೃಹತ್ ಪ್ರತಿಭಟನೆ ನಡೆಸಿದೆ. ದೇಶದಲ್ಲಿ ನಿರಂತರವಾಗಿ ಎದುರಾಗುತ್ತಿರುವ ತೀವ್ರ ಬೆಲೆ ಏರಿಕೆ, ಇಂಧನ ಮತ್ತು ಎಲ್‌ಪಿಜಿ ಕೊರತೆ ಹಾಗೂ ವಿದ್ಯುತ್ ಕಡಿತವನ್ನು ಖಂಡಿಸಿ ಎನ್‌ಸಿಪಿ ಕಾರ್ಯಕರ್ತರು ಬೀದಿಗಿಳಿದು ಸರ್ಕಾರದ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ಪ್ರಧಾನಿ ತಾರಿಕ್ ರೆಹಮಾನ್ ಅವರ ಆಡಳಿತ ವೈಫಲ್ಯವನ್ನು ಪ್ರಶ್ನಿಸಿದ ಪ್ರತಿಭಟನಾಕಾರರು, ಭಾರತ ವಿರೋಧಿ ಘೋಷಣೆಗಳನ್ನೂ ಕೂಗಿದರು.

# 400 ಸಿಕ್ಸರ್ ಬಾರಿಸಿ ಭಾರತ ಜಾಗತಿಕ ದಾಖಲೆ!





ಹೈದರಾಬಾದ್ : ಟಿ20 ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಭಾರತೀಯ ತಂಡ ಐತಿಹಾಸಿಕ ಸಾಧನೆ ಮಾಡಿದ್ದು, ಒಂದೇ ಕ್ಯಾಲೆಂಡರ್ ವರ್ಷದಲ್ಲಿ 400 ಸಿಕ್ಸರ್‌ಗಳನ್ನು ಬಾರಿಸಿದ ವಿಶ್ವದ ಮೊದಲ ತಂಡ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. 2026ರ 40 ಟಿ20 ಪಂದ್ಯಗಳಲ್ಲಿ ಟೀಮ್ ಇಂಡಿಯಾ ಬರೋಬ್ಬರಿ 400 ಸಿಕ್ಸರ್‌ಗಳನ್ನು ಸಿಡಿಸಿದ್ದು, ಪ್ರತಿ ಪಂದ್ಯದಲ್ಲಿ ಸರಾಸರಿ 10 ಸಿಕ್ಸರ್‌ಗಳ ಕೊಡುಗೆ ನೀಡಿದೆ.

# ಹೊಸ ಮೈಲಿಗಲ್ಲು ಸ್ಥಾಪಿಸಿದ ಹರ್ಷದೀಪ್ ಸಿಂಗ್




ಹ್ಯಾಮಿಲ್ಟನ್: ಭಾರತ ಕ್ರಿಕೆಟ್ ತಂಡದ ಯುವ ಎಡಗೈ ವೇಗದ ಬೌಲರ್ ಹರ್ಷದೀಪ್ ಸಿಂಗ್ ಅಂತಾರಾಷ್ಟ್ರೀಯ ಟಿ–20 ಕ್ರಿಕೆಟ್‌ನಲ್ಲಿ ಮತ್ತೊಂದು ಐತಿಹಾಸಿಕ ದಾಖಲೆಯನ್ನು ತಮ್ಮ ಹೆಸರಿಗೆ ಬರೆದುಕೊಂಡಿದ್ದಾರೆ. ಪೂರ್ಣ ಸದಸ್ಯ ರಾಷ್ಟ್ರಗಳ ಪುರುಷರ ಟಿ–20 ಪಂದ್ಯಗಳ ಪವರ್‌ಪ್ಲೇ (ಮೊದಲ ಆರು ಓವರ್‌ಗಳು) ಹಂತದಲ್ಲಿ ಅತ್ಯಧಿಕ ವಿಕೆಟ್‌ಗಳನ್ನು ಕಬಳಿಸಿದ ಬೌಲರ್‌ಗಳ ಸಾಲಿನಲ್ಲಿ ಹರ್ಷದೀಪ್ ಸಿಂಗ್ ಅಗ್ರಸ್ಥಾನದ ದಾಖಲೆಯನ್ನು ಸರಿಗಟ್ಟಿದ್ದಾರೆ.

# ಭಾರತ–ಪಾಕ್ ಪಂದ್ಯದ ಟಿಕೆಟ್‌ಗಾಗಿ ಮುಗಿಬಿದ್ದ ಅಭಿಮಾನಿಗಳು !




ಹೈದರಬಾದ್ : ದಕ್ಷಿಣ ಆಫ್ರಿಕಾ, ಜಿಂಬಾಬ್ವೆ ಮತ್ತು ನಮೀಬಿಯಾ ಜಂಟಿಯಾಗಿ ಆಯೋಜಿಸುತ್ತಿರುವ ಈ ಬಾರಿಯ ವಿಶ್ವಕಪ್‌ನಲ್ಲಿ ಭಾರತ ಮತ್ತು ಪಾಕಿಸ್ತಾನ ನಡುವಿನ ಲೀಗ್ ಪಂದ್ಯವನ್ನು ವೀಕ್ಷಿಸಲು ಅಭಿಮಾನಿಗಳು ಈಗಿನಿಂದಲೇ ಕಾತರದಿಂದ ಕಾಯುತ್ತಿದ್ದಾರೆ. ಅಂತರರಾಷ್ಟ್ರೀಯ ಕ್ರಿಕೆಟ್ ಮಂಡಳಿ (ಐಸಿಸಿ) ಆರಂಭಿಸಿರುವ ಅಧಿಕೃತ ಟಿಕೆಟ್ ಲಾಟರಿ (ಬ್ಯಾಲೆಟ್) ಪ್ರಕ್ರಿಯೆಯಲ್ಲಿ ಭಾರತ–ಪಾಕ್ ಪಂದ್ಯಕ್ಕಾಗಿ ಬರೋಬ್ಬರಿ 83.97 ಲಕ್ಷಕ್ಕೂ (ಸುಮಾರು 84 ಲಕ್ಷ) ಹೆಚ್ಚು ಟಿಕೆಟ್ ಅರ್ಜಿಗಳು ಸಲ್ಲಿಕೆಯಾಗಿವೆ.

# ಸಾರಿಗೆ ಸಂಸ್ಥೆಗಳ ಆರ್ಥಿಕ ಶಕ್ತಿ ಮತ್ತು ಬಸ್ ದರ ಹೆಚ್ಚಳ : ಡಿ.ಕೆ.ಶಿ.



ಬೆಂಗಳೂರು : ಶಕ್ತಿ ಯೋಜನೆಯ ಯಶಸ್ವಿ ಅನುಷ್ಠಾನದ ನಡುವೆಯೇ ಸಾರಿಗೆ ಸಂಸ್ಥೆಗಳ ಸುಸ್ಥಿರ ಕಾರ್ಯಾಚರಣೆ ಹಾಗೂ ಆರ್ಥಿಕ ಸ್ಥಿರತೆಯನ್ನು ಕಾಯ್ದುಕೊಳ್ಳಲು ಬಸ್ ಪ್ರಯಾಣ ದರದಲ್ಲಿ ಏರಿಕೆ ಮಾಡುವುದು ಅನಿವಾರ್ಯವಾಗಿದೆ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ. ಮಹಿಳೆಯರಿಗೆ ಉಚಿತ ಪ್ರಯಾಣ ಕಲ್ಪಿಸುವ ಶಕ್ತಿ ಯೋಜನೆಯಿಂದಾಗಿ ಸಂಸ್ಥೆಗಳ ಮೇಲಿನ ಆರ್ಥಿಕ ಹೊರೆ ಹೆಚ್ಚಾಗಿದ್ದು, ಇದೇ ಸಮಯದಲ್ಲಿ ಡೀಸೆಲ್ ದರ ಏರಿಕೆ, ಬಿಡಿಭಾಗಗಳ ವೆಚ್ಚ ಮತ್ತು ನೌಕರರ ವೇತನ ಹೆಚ್ಚಳದಿಂದ ಸಾರಿಗೆ ನಿಗಮಗಳು ತೀವ್ರ ಆರ್ಥಿಕ ಸಂಕಷ್ಟವನ್ನು ಎದುರಿಸುತ್ತಿವೆ ಅವುಗಳ ಉಳಿವಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು ಸರ್ಕಾರದ ಕರ್ತವ್ಯವಾಗಿದೆ.

# ಬರ ಪರಿಹಾರಕ್ಕಾಗಿ ಆರ್ಥಿಕ ನೆರವು ಬಿಡುಗಡೆ ಮಾಡುವಂತೆ ಕೇಂದ್ರಕ್ಕೆ ಮನವಿ




ಬೆಂಗಳೂರು: ರಾಜ್ಯದಲ್ಲಿ ಉಂಟಾಗಿರುವ ತೀವ್ರ ಬರ ಪರಿಸ್ಥಿತಿಯನ್ನು ಸಮರ್ಥವಾಗಿ ನಿಭಾಯಿಸಲು ಮತ್ತು ಸಂಕಷ್ಟದಲ್ಲಿರುವ ರೈತರ ಕೈಹಿಡಿಯಲು ರಾಷ್ಟ್ರೀಯ ವಿಪತ್ತು ಪ್ರತಿಕ್ರಿಯಾ ನಿಧಿ (NDRF) ಅಡಿಯಲ್ಲಿ 22,400.58 ಕೋಟಿ ಬರ ಪರಿಹಾರವನ್ನು ತ್ವರಿತವಾಗಿ ಮಂಜೂರು ಮಾಡಿ ಬಿಡುಗಡೆ ಮಾಡುವಂತೆ ಉಪಮುಖ್ಯಮಂತ್ರಿ ಹಾಗೂ ಕಂದಾಯ ಸಚಿವರೂ ಆದ ಡಾ.ಜಿ. ಪರಮೇಶ್ವರ ಅವರು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದ್ದಾರೆ. ಈ ಕುರಿತು ಪ್ರಧಾನಮಂತ್ರಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಹಾಗೂ ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರಿಗೆ ಡಾ.ಜಿ. ಪರಮೇಶ್ವರ ಪ್ರತ್ಯೇಕ ಪತ್ರಗಳನ್ನು ಬರೆದಿದ್ದಾರೆ.

# ಎಸ್‌ಐಆರ್ ವಿವಾದಕ್ಕೆ ರಾಜ್ಯ ಸರ್ಕಾರವೇ ಹೊಣೆ –ಸಿ.ಟಿ. ರವಿ



ಬೆಂಗಳೂರು : ವಿಶೇಷ ಸಮಗ್ರ ಪರಿಷ್ಕರಣೆ ಪ್ರಕ್ರಿಯೆಯಲ್ಲಿನ ಲೋಪಗಳಿಗೆ ರಾಜ್ಯ ಸರ್ಕಾರವೇ ಹೊಣೆ ಹೊರಬೇಕೇ ಹೊರತು ಚುನಾವಣಾ ಆಯೋಗವನ್ನು ಗುರಿಯಾಗಿಸುವುದು ಸರಿಯಲ್ಲ ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಎಸ್‌ಐಆರ್ ವಿಕೇಂದ್ರೀಕೃತ ವ್ಯವಸ್ಥೆಯಾಗಿದ್ದು, ರಾಜ್ಯ ಸರ್ಕಾರದ ಅಧೀನದಲ್ಲಿರುವ ಬಿಎಲ್‌ಒಗಳು, ಶಿಕ್ಷಕರು ಮತ್ತು ಕಂದಾಯ ಅಧಿಕಾರಿಗಳೇ ಈ ಪ್ರಕ್ರಿಯೆಯನ್ನು ಅನುಷ್ಠಾನಗೊಳಿಸಿದ್ದಾರೆ, 99ಲಕ್ಷ ಮತದಾರರನ್ನು ಗೈರುಹಾಜರಿ, ಸ್ಥಳಾಂತರ, ಮರಣ ಹಾಗೂ ನಕಲಿ ಎಂಬ ಕಾರಣಗಳಡಿ ಗುರುತಿಸಲಾಗಿದ್ದು, ತಪ್ಪಾಗಿ ಹೆಸರು ತೆಗೆದುಹಾಕಿದ್ದರೆ ಅದಕ್ಕೆ ಯಾರು ಹೊಣೆ ಎಂಬುದನ್ನು ಕಾಂಗ್ರೆಸ್ ಸ್ಪಷ್ಟಪಡಿಸಬೇಕು ಎಂದರು.

# ಪಿಂಚಣಿ ಸರ್ಕಾರದ ಭಿಕ್ಷೆಯಲ್ಲ : ರಾಜ್ಯ ಸರ್ಕಾರದ ಮೇಲ್ಮನವಿ ವಜಾ



ಬೆಂಗಳೂರು : ಉದ್ಯೋಗಿಯೊಬ್ಬರು ತಾಂತ್ರಿಕ ಕಾರಣಗಳಿಗಾಗಿ ಒಂದು ವಿಶ್ವವಿದ್ಯಾಲಯದಿಂದ ಮತ್ತೊಂದಕ್ಕೆ ಸೇರಿದ ತಕ್ಷಣ ಅವರ ಹಿಂದಿನ ಸೇವಾವಧಿ ರದ್ದಾಗುವುದಿಲ್ಲ ಎಂದು ಕರ್ನಾಟಕ ಹೈಕೋರ್ಟ್ ಮಹತ್ವದ ತೀರ್ಪು ನೀಡಿದೆ. ನಿವೃತ್ತ ಪ್ರೊಫೆಸರ್ ಒಬ್ಬರಿಗೆ ಹಳೆಯ ಪಿಂಚಣಿ ಯೋಜನೆ (OPS) ಅಡಿಯಲ್ಲೇ ಸೌಲಭ್ಯ ಕಲ್ಪಿಸುವಂತೆ ಏಕಸದಸ್ಯ ಪೀಠ ನೀಡಿದ್ದ ಆದೇಶವನ್ನು ಎತ್ತಿಹಿಡಿದಿರುವ ವಿಭಾಗೀಯ ಪೀಠ, 'ಪಿಂಚಣಿ ಎಂಬುದು ಸರ್ಕಾರ ನೀಡುವ ಭಿಕ್ಷೆಯಲ್ಲ, ಅದು ಉದ್ಯೋಗಿಯ ಅರ್ಹ ಹಕ್ಕು" ಎಂದು ಖಾರವಾಗಿ ಹೇಳಿ ರಾಜ್ಯಸರ್ಕಾರದ ಮೇಲ್ಮನವಿಯನ್ನು ವಜಾಗೊಳಿಸಿ ವಿಭಾಗೀಯ ಪೀಠ ಈ ಆದೇಶ ಹೊರಡಿಸಿದೆ.

# ರೈತರಿಗೆ ಮಧ್ಯಂತರ ಬರ ಪರಿಹಾರ ವಿತರಣೆ ಆರಂಭ




ಬೆಂಗಳೂರು : ರಾಜ್ಯದ ಕಷ್ಟದ ಪರಿಸ್ಥಿತಿಯಲ್ಲಿರುವ ರೈತರ ನೆರವಿಗೆ ಧಾವಿಸಿರುವ ರಾಜ್ಯ ಸರ್ಕಾರವು, ಮಧ್ಯಂತರ ಬರ ಪರಿಹಾರ ವಿತರಣಾ ಪ್ರಕ್ರಿಯೆಗೆ ಇಂದಿನಿಂದ ಅಧಿಕೃತವಾಗಿ ಚಾಲನೆ ನೀಡಿದೆ. ಕೇಂದ್ರ ಸರ್ಕಾರದ ಆರ್ಥಿಕ ನೆರವಿನ ನಿರೀಕ್ಷೆಯಲ್ಲೇ ಕಾಲ ಕಳೆಯದೆ, ರಾಜ್ಯ ಸರ್ಕಾರವೇ ಸ್ವತಃ 1250 ಕೋಟಿ ರೂಪಾಯಿಗಳ ಬೃಹತ್ ನಿಧಿಯನ್ನು ಮೀಸಲಿಟ್ಟು ಅರ್ಹ ರೈತರಿಗೆ ಗರಿಷ್ಠ 2500ರೂ.ಗಳವರೆಗೆ ಮಧ್ಯಂತರ ಪರಿಹಾರವನ್ನು ಜಮಾ ಮಾಡಲು ಕ್ರಮಕೈಗೊಂಡಿದೆ ಎಂದು ಡಿಸಿಎಂ ತಿಳಿಸಿದ್ದಾರೆ. ಪ್ರಸ್ತುತ ಬರಪರಿಸ್ಥಿತಿಯ ತೀವ್ರತೆಯನ್ನು ಪರಿಗಣಿಸಿ ಮೊದಲ ಕಂತಿನ ಪರಿಹಾರ ಹಣವನ್ನು ನೇರವಾಗಿ ರೈತರ ಖಾತೆಗಳಿಗೆ ತಲುಪಿಸಲಾಗುತ್ತಿದೆ.

# ರಾಜ್ಯದ 7 ಶಾಸಕರ ವಿರುದ್ಧ ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣ!



ಬೆಂಗಳೂರು : ಅಪರಾಧ ಹಿನ್ನೆಲೆಯುಳ್ಳ ನಾಯಕರು ಶಾಸನಸಭೆ ಪ್ರವೇಶಿಸುತ್ತಿರುವ ವಿಚಾರ ಮತ್ತೆ ತೀವ್ರ ಚರ್ಚೆಗೆ ಗ್ರಾಸವಾಗಿದೆ. ಕರ್ನಾಟಕದ ಹಾಲಿ 7ಜನ ಶಾಸಕರು ಮಹಿಳೆಯರ ಮೇಲಿನ ಅಪರಾಧ ಹಾಗೂ ಕಿರುಕುಳಕ್ಕೆ ಸಂಬಂಧಿಸಿದ ಗಂಭೀರ ಪ್ರಕರಣಗಳನ್ನು ಎದುರಿಸುತ್ತಿದ್ದಾರೆ ಎಂದು ಆಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ADR) ಸಂಸ್ಥೆಯ ನೂತನ ವರದಿಯು ಆತಂಕಕಾರಿ ಸತ್ಯವನ್ನು ಹೊರಹಾಕಿದೆ. ವರದಿಯ ಪ್ರಕಾರ ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳನ್ನು ಹೊಂದಿರುವ ಹಾಲಿ ಸಂಸದರು ಮತ್ತು ಶಾಸಕರ ಸಂಖ್ಯೆಯಲ್ಲಿ ಕರ್ನಾಟಕ ರಾಜ್ಯವು ದೇಶದಲ್ಲೇ 6ನೇ ಸ್ಥಾನದಲ್ಲಿದೆ.

# ಕರಡು ಪಟ್ಟಿಯಲ್ಲಿ ಹೆಸರಿಲ್ಲದಿದ್ದರೆ ಮರು ಅರ್ಜಿ ಸಲ್ಲಿಸಿ: ಚುನಾವಣಾ ಆಯೋಗ




ನವದೆಹಲಿ: ಪ್ರಸ್ತುತ ನಡೆಯುತ್ತಿರುವ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ ಪ್ರಕ್ರಿಯೆಯ (SIR) ಅಡಿಯಲ್ಲಿ ಪ್ರಕಟಿಸಲಾದ ಕರಡು ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರು ಬಿಟ್ಟುಹೋಗಿರುವ ಮತದಾರರು, ಕೂಡಲೇ ಹೊಸದಾಗಿ ಅರ್ಜಿ ಸಲ್ಲಿಸಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬೇಕು ಎಂದು ಚುನಾವಣಾ ಆಯೋಗ ತಿಳಿಸಿದೆ. ಹಿಂದೆ ಮತದಾರರ ಪಟ್ಟಿಯಲ್ಲಿ ಹೆಸರು ನೋಂದಾಯಿಸಿಕೊಂಡಿದ್ದರೂ, ಪ್ರಸ್ತುತ ಕರಡು ಪಟ್ಟಿಯಲ್ಲಿ ಹೆಸರು ಕಂಡುಬರದಿದ್ದರೆ ಅಂತಹ ಮತದಾರರು ಮತ್ತೊಮ್ಮೆ ಸೂಕ್ತ ನಮೂನೆಯ (ಫಾರ್ಮ್ 6) ಮೂಲಕ ಅರ್ಜಿ ಸಲ್ಲಿಸುವುದು ಕಡ್ಡಾಯವಾಗಿದೆ.

# ದೆಹಲಿಯಲ್ಲಿ ನಿಷೇಧಿತ ಪಟಾಕಿ ಮುಕ್ತ ಮಾರಾಟ: ಸುಪ್ರೀಂ ಕೋರ್ಟ್ ಕಳವಳ



ನವದೆಹಲಿ : ಸುಪ್ರೀಂಕೋರ್ಟ್ ಸಡಿಲಿಕೆಯ ನಿರ್ಬಂಧಗಳ ಹೊರತಾಗಿಯೂ ದೆಹಲಿಯ ಮಾರುಕಟ್ಟೆಗಳಲ್ಲಿ ನಿಷೇಧಿತ ಪಟಾಕಿಗಳು ಸರಿಹೊಂದದ ಪ್ರಮಾಣಪತ್ರಗಳೊಂದಿಗೆ ಮುಕ್ತವಾಗಿ ಮಾರಾಟವಾಗುತ್ತಿರುವ ವರದಿಗಳ ಕುರಿತು ಸುಪ್ರೀಂಕೋರ್ಟ್ ತೀವ್ರ ಕಳವಳ ವ್ಯಕ್ತಪಡಿಸಿದೆ. ದೀಪಾವಳಿ ಹಬ್ಬದ ಆಚರಣೆಯ ಹಿನ್ನೆಲೆಯಲ್ಲಿ ವಾಯು ಮಾಲಿನ್ಯ ನಿಯಂತ್ರಣಕ್ಕೆ ಆದ್ಯತೆ ನೀಡಿರುವ ಸುಪ್ರೀಂಕೋರ್ಟ್, ದೆಹಲಿ ಮತ್ತು ಎನ್‌ಸಿಆರ್ ವ್ಯಾಪ್ತಿಯಲ್ಲಿ ಕೇವಲ ಮಾನ್ಯ ಪ್ರಮಾಣೀಕೃತ 'ಹಸಿರು ಪಟಾಕಿಗಳನ್ನು' ನಿಯಮಿತ ಅವಧಿಗೆ ಆಯ್ದ ದಿನಗಳಲ್ಲಿ ಸಿಡಿಸಲು ಷರತ್ತು ಬದ್ಧ ಅನುಮತಿಯನ್ನು ನೀಡಿ ಆದೇಶ ಹೊರಡಿಸಿತ್ತು.

# ಸೊಮಾಲಿಯಾ ಕಡಲ್ಗಳ್ಳರಿಂದ ಮೀನುಗಾರಿಕಾ ಹಡಗು ರಕ್ಷಣೆ



ನವದೆಹಲಿ : ಅರಬ್ಬಿ ಸಮುದ್ರ ಹಾಗೂ ಭಾರತೀಯ ಮಹಾಸಾಗರ ಪ್ರದೇಶದಲ್ಲಿ ಕಡಲ್ಗಳ್ಳರ ಅಟ್ಟಹಾಸಕ್ಕೆ ತಡೆ ಒಡ್ಡುವಲ್ಲಿ ಭಾರತೀಯ ನೌಕಾಪಡೆ ಮತ್ತೊಮ್ಮೆ ತನ್ನ ಸಾಹಸ ಹಾಗೂ ಬದ್ಧತೆಯನ್ನು ಮೆರೆದಿದೆ. ಸೊಮಾಲಿಯಾ ಕರಾವಳಿಯ ಬಳಿ ಶಸ್ತ್ರಸಜ್ಜಿತ ಕಡಲ್ಗಳ್ಳರಿಂದ ಅಪಹರಣಕ್ಕೊಳಗಾಗಿದ್ದ ಮೀನುಗಾರಿಕಾ ಹಡಗನ್ನು ಸುದೀರ್ಘ ಕಾರ್ಯಾಚರಣೆಯ ಮೂಲಕ ನೌಕಾಪಡೆ ಯಶಸ್ವಿಯಾಗಿ ರಕ್ಷಿಸಿದೆ. ಬಂದರ್ ಬೇಲಾ ಮತ್ತು ಹಪುನ್ ಕರಾವಳಿ ಪಟ್ಟಣಗಳ ನಡುವಿನ ಸಮುದ್ರ ಪ್ರದೇಶದಲ್ಲಿ ಈ ಅಪಹರಣ ಘಟನೆ ನಡೆದಿತ್ತು. ಆಯುಧಗಳನ್ನು ಹಿಡಿದುಕೊಂಡು ದಾಳಿ ನಡೆಸಿದ್ದ ಕಡಲ್ಗಳ್ಳರು ಹಡಗನ್ನು ವಶಕ್ಕೆ ತೆಗೆದುಕೊಂಡಿದ್ದರು.

# ದೆಹಲಿ–ಉತ್ತರ ಭಾರತ ಬುಲೆಟ್ ರೈಲು ಕಾರಿಡಾರ್‌ಗೆ ಅನುಮೋದನೆ



ನವದೆಹಲಿ : ಭಾರತದ ಸಾರಿಗೆ ಸಂಪರ್ಕ ಕ್ಷೇತ್ರದಲ್ಲಿ ಮತ್ತೊಂದು ಮಹತ್ವದ ಮೈಲಿಗಲ್ಲು ಸ್ಥಾಪನೆಯಾಗಿದ್ದು, ದೆಹಲಿ ಹಾಗೂ ಉತ್ತರ ಭಾರತದ ಪ್ರಮುಖ ನಗರಗಳನ್ನು ಸಂಪರ್ಕಿಸುವ ಬುಲೆಟ್ ರೈಲು ಕಾರಿಡಾರ್ ಯೋಜನೆಗೆ ಪ್ರಧಾನಿ ನರೇಂದ್ರ ಮೋದಿ ಅನುಮೋದನೆ ನೀಡಿದ್ದಾರೆ. ಈ ಕುರಿತು ಸಂತಸ ಹಂಚಿಕೊಂಡಿರುವ ಕೇಂದ್ರ ರೈಲ್ವೇ ಸಚಿವ ಅಶ್ವಿನಿ ವೈಷ್ಣವ್, ಈ ಯೋಜನೆಯಿಂದ ಪ್ರಯಾಣದ ಸಮಯದಲ್ಲಿ ಭಾರಿ ಉಳಿತಾಯವಾಗಲಿದ್ದು, ತ್ವರಿತ ಸಾರಿಗೆ ಸಂಪರ್ಕಕ್ಕೆ ಹೈ–ಸ್ಪೀಡ್ ರೈಲು ಸೇತುವೆಯಾಗಿ ಕೆಲಸ ಮಾಡಲಿದೆ ಎಂದಿದ್ದಾರೆ. ಈ ಹೊಸ ಬುಲೆಟ್ ರೈಲು ದೆಹಲಿ, ಆಗ್ರಾ, ಕಾನ್ಪುರ, ಲಖನೌ, ಆಯೋಧ್ಯೆ, ಪ್ರಯಾಗರಾಜ್, ವಾರಣಸಿ ಹಾಗೂ ಬಿಹಾರದ ಪಾಟ್ನಾವನ್ನು ಸಂಪರ್ಕಿಸಲಿದೆ.

# ಸೋಷಿಯಲ್ ಮೀಡಿಯಾದಲ್ಲಿ ಕ್ಷಮೆಯಾಚಿಸಿದ ಅಭಿಜೀತ್ ದಿಪ್ಕೆ



ನವದೆಹಲಿ : ದೆಹಲಿಯ ಜವಾಹರಲಾಲ್ ನೆಹರು ಸ್ಟೇಡಿಯಂನಲ್ಲಿ ನಡೆದ ತಮ್ಮ ಲೈವ್ ಕಾನ್ಸರ್ಟ್‌ನಲ್ಲಿ ಗಾಯಕ ಹಾಗೂ ನಟ ದಿಲ್ಜಿತ್ ದೋಸಾಂಜ್ ತಮ್ಮ ಟೀಕಾಕಾರರಿಗೆ ಮತ್ತು ಸಿಜೆಪಿ (ಕಾಕ್ರೋಚ್ ಜನತಾ ಪಾರ್ಟಿ) ನಾಯಕ ಅಭಿಜೀತ್ ದಿಪ್ಕೆಗೆ ವೇದಿಕೆಯ ಮೇಲಿಂದಲೇ ನೇರ ಮತ್ತು ಖಡಕ್ ತಿರುಗೇಟು ನೀಡಿದ್ದಾರೆ. ದಿಲ್ಜಿತ್ ಅವರ ಈ ಖಾರವಾದ ಹೇಳಿಕೆ ಬಹಿರಂಗವಾಗುತ್ತಿದ್ದಂತೆ, ಟ್ವಿಟರ್ (X)ನಲ್ಲಿ ಪೋಸ್ಟ್‌ಗಳನ್ನು ಹಾಕುತ್ತಿದ್ದ ಸಿಜೆಪಿ ನಾಯಕ ಅಭಿಜೀತ್ ದಿಪ್ಕೆ ಇನ್‌ಸ್ಟಾಗ್ರಾಮ್‌ನಲ್ಲಿ ಸುದೀರ್ಘ ಕ್ಷಮಾಪಣಾ ಪತ್ರವನ್ನು ಹಂಚಿಕೊಂಡಿದ್ದಾರೆ. ತಾವು ಸ್ವತಃ ದಿಲ್ಜಿತ್ ಅವರ ದೊಡ್ಡ ಅಭಿಮಾನಿ ಎಂದಿದ್ದಾರೆ.



ಕರಾವಳಿ ತರಂಗಿಣಿ

# ಕಲಾ ತರಂಗಿಣಿ



## ಹೊಸ ವರ್ಷದ ಮೊದಲ ಪ್ರೇಮಕಥೆಯಾಗಿ 'ಮಿಸ್‌ಮ್ಯಾಚ್'!

ಹೊಸ ವರ್ಷದ ಆರಂಭಕ್ಕೆ ಪ್ರೀತಿ, ಸ್ನೇಹ ಹಾಗೂ ಹಾಸ್ಯದ ಮನರಂಜನಾತ್ಮಕ ಕಥೆಯೊಂದಿಗೆ ಬರುತ್ತಿದೆ 'ಮಿಸ್‌ಮ್ಯಾಚ್' ಸಿನಿಮಾ. ನಿರ್ದೇಶಕ ಸಾಯಿ ಶ್ರೀನಿಧಿ ರೂಪಿಸಿರುವ ಈ ಚಿತ್ರ ಜನವರಿ 8, 2027ರಂದು ರಾಜ್ಯಾದ್ಯಂತ ಬಿಡುಗಡೆಯಾಗಲಿದೆ. ಚಿತ್ರದ ಪತ್ರಿಕಾಗೋಷ್ಠಿಯಲ್ಲಿ ನಿರ್ದೇಶಕ ಸಾಯಿ ಶ್ರೀನಿಧಿ, ನಿರ್ಮಾಪಕ ತೇಜಸ್ ವೆಂಕಟೇಶ್, ನಾಯಕ ಕೌಶಿಕ್ ಗೌಡ, ನಾಯಕಿ ಅಶ್ವಿತಾ ಹೆಗ್ಡೆ, ನಟ ತೇಜೇಶ್ ಎಸ್.ಎಂ. ಹಾಗೂ ನಟ ಅಮೃತ ಕೆ.ಪಿ. ಸೇರಿದಂತೆ ಚಿತ್ರತಂಡದ ಸದಸ್ಯರು ಭಾಗವಹಿಸಿ ಚಿತ್ರದ ವಿಶೇಷತೆಗಳನ್ನು ಹಂಚಿಕೊಂಡರು. ಮಲೆನಾಡಿನ ಪುಟ್ಟ ಊರಿನಲ್ಲಿ ನಡೆಯುವ ಈ ಕಥೆ ವಿಭಿನ್ನ ಮನೋಭಾವದ ನಾಯಕ-ನಾಯಕಿಯ ಪ್ರಪಂಚವನ್ನು ತೆರೆದಿಡುತ್ತದೆ. ನಾಯಕ ನಗರ ಜೀವನವನ್ನು ತೊರೆದು ತನ್ನೂರಿಗೆ ಮರಳಿದರೆ, ನಾಯಕಿ ಅದೇ ಊರಿನಲ್ಲಿದ್ದುಕೊಂಡು ನಗರದ ಸ್ವತಂತ್ರ ಬದುಕಿನ ಕನಸು ಕಾಣುತ್ತಾಳೆ. ಇವರಿಬ್ಬರ ಕನಸು, ಆಸೆ ಹಾಗೂ ಪ್ರೀತಿಯ ನಡುವೆ ಹೊಂದಾಣಿಕೆ ಸಾಧ್ಯವಾಗುತ್ತದೆಯೇ ಎಂಬುದೇ ಚಿತ್ರದ ಕುತೂಹಲ. ಇದು ಕುಟುಂಬ ಸಮೇತ ನೋಡಬಹುದಾದ ಮುಗ್ಧ ಪ್ರೇಮಕಥೆಯಾಗಿದ್ದು, ಸಹಜ ಪಾತ್ರಗಳು, ಹಾಸ್ಯ, ಭಾವನಾತ್ಮಕ ಸನ್ನಿವೇಶಗಳು ಹಾಗೂ ಕೆಲವು ಆಕ್ಷನ್ ದೃಶ್ಯಗಳೂ ಚಿತ್ರದಲ್ಲಿವೆ ಎಂದು ನಿರ್ದೇಶಕ ಸಾಯಿ ಶ್ರೀನಿಧಿ ತಿಳಿಸಿದರು. ಕಳೆದ 13 ವರ್ಷಗಳಿಂದ ಐಟಿ ಮತ್ತು ಎಐ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ನಿರ್ಮಾಪಕ ತೇಜಸ್ ವೆಂಕಟೇಶ್, ತಮ್ಮ ವೃತ್ತಿಜೀವನಕ್ಕೆ ವಿರಾಮ ನೀಡಿ ಈ ಚಿತ್ರದ ನಿರ್ಮಾಣದ ಜವಾಬ್ದಾರಿ ವಹಿಸಿ ಕೊಂಡಿದ್ದಾರೆ. ಈ ಹಿಂದೆ 'ಬಿಟಿಎಸ್' ಚಿತ್ರದಲ್ಲಿ ಹೂಡಿಕೆದಾರರಾಗಿದ್ದ ಅವರಿಗೆ ಕೌಶಿಕ್ ಅಭಿನಯ ಇಷ್ಟವಾಗಿತ್ತು. ಅವರೊಂದಿಗೆ ಸಿನಿ ಮಾ ಮಾಡುವ ಆಸೆಯ ಫಲವಾಗಿ 'ಮಿಸ್‌ಮ್ಯಾಚ್' ರೂಪುಗೊಂಡಿದೆ. ಸುಮಾರು 40 ರಿಂದ 45 ದಿನಗಳ ಕಾಲ ಚಿಕ್ಕಮಗಳೂರಿನಲ್ಲಿ ಚಿತ್ರೀಕರಣ ನಡೆಸಲಾಗಿದ್ದು, ಇಡೀ ಚಿತ್ರತಂಡ ಕುಟುಂಬದಂತೆ ಕೆಲಸ ಮಾಡಿದೆ ಎಂದರು.



## ಕನಕದಾಸರ ಜಯಂತಿಯಂದು 'ಕಾಖಂಡಕಿ ಶ್ರೀ ಮಹಿಪತಿ ದಾಸರು' ತೆರೆಗೆ

ಕನ್ನಡದ ದಾಸ ಸಾಹಿತ್ಯ ಮತ್ತು ಹರಿದಾಸರ ಜೀವನಗಾಥೆಯನ್ನು ಬೆಳ್ಳಿತೆರೆಯ ಮೂಲಕ ಜನರಿಗೆ ತಲುಪಿಸುವ ಪ್ರಯತ್ನದಲ್ಲಿ ತೊಡಗಿರುವ ನಿರ್ದೇಶಕ ಮಧುಸೂದನ್ ಹವಾಲ್ದಾರ್ ಅವರ ಐದನೇ ಹರಿದಾಸರ ಚಿತ್ರ 'ಕಾಖಂಡಕಿ ಶ್ರೀ ಮಹಿಪತಿ ದಾಸರು' ನವೆಂಬರ್ 27ರಂದು ಕನಕದಾಸರ ಜಯಂತಿಯ ಶುಭ ಸಂದರ್ಭದಲ್ಲಿ ರಾಜ್ಯಾದ್ಯಂತ ತೆರೆಕಾಣಲಿದೆ. 2021ರಲ್ಲಿ 'ಜಗನ್ನಾಥ ದಾಸರು' ಚಿತ್ರದ ಮೂಲಕ ಆರಂಭವಾದ ಈ ಪಯಣ, 'ಪ್ರಸನ್ನ ವೆಂಕಟದಾಸರು', 'ವಿಜಯದಾಸರು', 'ಜಗನ್ನಾಥ ದಾಸರು ಭಾಗ-2' ಚಿತ್ರಗಳ ಬಳಿಕ ಇದೀಗ 'ಕಾಖಂಡಕಿ ಶ್ರೀ ಮಹಿಪತಿ ದಾಸರು' ಚಿತ್ರದೊಂದಿಗೆ ಮುಂದುವರಿದಿದೆ. 5ವರ್ಷಗಳಲ್ಲಿ 5 ಹರಿದಾಸರ ಜೀವನಾಧಾರಿತ ಚಿತ್ರಗಳನ್ನು ನಿರ್ಮಿಸಿ, ನಿರ್ದೇಶಿಸಿರುವುದು ತಮ್ಮ ಪಾಲಿನ ಪವಾಡವೇ ಸರಿ ಎಂದು ಹವಾಲ್ದಾರ್ ಸಂತಸ ವ್ಯಕ್ತಪಡಿಸಿದ್ದಾರೆ. ಆದಿಲ್‌ಶಾಹಿ ಅರಮನೆಯಲ್ಲಿ ಉನ್ನತ ಹುದ್ದೆಯಲ್ಲಿದ್ದ ಮಹಿಪತಿ ದಾಸರು, ಸೂಫಿ ಸಂತ ಶಾನುಂಗ ಅವರ ಪ್ರಭಾವಕ್ಕೆ ಒಳಗಾಗಿ, ಬಳಿಕ ಭಾಸ್ಕರ ಸ್ವಾಮಿಗಳ ಶಿಷ್ಯತ್ವ ಸ್ವೀಕರಿಸಿ ವೈರಾಗ್ಯದ ಹಾದಿ ಹಿಡಿದ ಜೀವನ ಗಾಥೆಯೇ ಈ ಚಿತ್ರದ ಪ್ರಮುಖ ಆಕರ್ಷಣೆ. 6 ಭಾಷೆಗಳಲ್ಲಿ ಪಾಂಡಿತ್ಯ ಹೊಂದಿದ್ದ ಮಹಿಪತಿ ದಾಸರ ಬದುಕಿನ ಮಹತ್ವದ ಘಟನೆಗಳನ್ನು ಇತಿಹಾಸಕ್ಕೆ ಧಕ್ಕೆಯಾಗದಂತೆ ಸಿನಿಮೀಯವಾಗಿ ಕಟ್ಟಿಕೊಡುವ ಪ್ರಯತ್ನವನ್ನು ಚಿತ್ರತಂಡ ಮಾಡಿದೆ. ಚಿತ್ರದ ಕ್ಲೈಮ್ಯಾಕ್ಸ್‌ನಲ್ಲಿ ಹನುಮ, ಭೀಮ ಮತ್ತು ಮಧ್ವ ಪಾತ್ರಗಳನ್ನು ಕಲ್ಪನಾತ್ಮಕವಾಗಿ ರೂಪಿಸಿ, ವಿಶೇಷ ವಿಎಫ್‌ಎಕ್ಸ್ ತಂತ್ರಜ್ಞಾನದ ಮೂಲಕ ದೃಶ್ಯವನ್ನು ಪರಿಣಾಮಕಾರಿಯಾಗಿ ಮೂಡಿಸಲಾಗಿದೆ. ಖ್ಯಾತ ಗಾಯಕ ರಾಯಚೂರು ಶೇಷಗಿರಿದಾಸ್ ಚಿತ್ರದಲ್ಲಿ ಅಭಿನಯಿಸುವುದರ ಜೊತೆಗೆ 'ಗುರುರಾಯನಂತ ಕರುಣಾಳು ಕಾಣೆ ಜಗದೊಳಗೆ' ಹಾಡನ್ನೂ ಹಾಡಿದ್ದಾರೆ. ಮಹಿಪತಿದಾಸರ ಪಾತ್ರದಲ್ಲಿ ವಿಜಯಾನಂದ ನಾಯಕ್ ಕಾಣಿಸಿಕೊಂಡಿದ್ದಾರೆ. ಚಾಂದಿನಿ ಮಹಿಪತಿ ದಾಸರ ಪತ್ನಿಯ ಪಾತ್ರವನ್ನು ನಿರ್ವಹಿಸಿದ್ದಾರೆ. ದಾಸ ಸಾಹಿತ್ಯದ ಮಹತ್ವವನ್ನು ಇಂದಿನ ಪೀಳಿಗೆಗೆ ಪರಿಚಯಿಸುವ ಉದ್ದೇಶದಿಂದ ಈ ಚಿತ್ರವನ್ನು ರೂಪಿಸಲಾಗಿದೆ. ಮುಂದಿನ ದಿನಗಳಲ್ಲಿ ವ್ಯಾಸರಾಜರು, ಪುರಂದರದಾಸರು, ಕನಕದಾಸರು ಸೇರಿದಂತೆ ಪ್ರಮುಖ ಹರಿದಾಸರು ಮತ್ತು ಯತಿಗಳ ಜೀವನಗಾಥೆಗಳನ್ನು ಆಧರಿಸಿದ ಚಿತ್ರ ಸರಣಿ ನಿರ್ಮಿಸುವ ಯೋಜನೆಯನ್ನೂ ಹವಾಲ್ದಾರ್ ಹೊಂದಿದ್ದಾರೆ.



## ಪ್ರೇಕ್ಷಕರ ಪ್ರೀತಿಯೊಂದಿಗೆ 50ನೇ ದಿನದ ಸಂಭ್ರಮದಲ್ಲಿ 'ಅಮೆರಿಕಾ ಅಮೆರಿಕಾ-2'

ಕನ್ನಡ ಚಿತ್ರರಂಗದಲ್ಲಿ ತಮ್ಮದೇ ಆದ ವಿಶಿಷ್ಟ ಛಾಪು ಮೂಡಿಸಿರುವ ಹಿರಿಯ ನಿರ್ದೇಶಕ ಡಾ. ನಾಗತಿಹಳ್ಳಿ ಚಂದ್ರಶೇಖರ್ ನಿರ್ದೇಶನದ 'ಅಮೆರಿಕಾ ಅಮೆರಿಕಾ-2' ಚಿತ್ರವು 50ನೇ ದಿನದ ಸಂಭ್ರಮವನ್ನು ಆಚರಿಸಿಕೊಂಡಿದೆ. ಬೆಂಗಳೂರಿನ ಕೊಂಡಜ್ಜಿ ಬಸಪ್ಪ ಸಭಾಂಗಣದಲ್ಲಿ ನಡೆದ ಸಂಭ್ರಮಾಚರಣೆ ಕಾರ್ಯಕ್ರಮದಲ್ಲಿ ಚಿತ್ರತಂಡದ ಸದಸ್ಯರು, ಕಲಾವಿದರು ಹಾಗೂ ಗಣ್ಯರು ಭಾಗವಹಿಸಿ ಚಿತ್ರದ ಯಶಸ್ಸಿನ ಸಂತಸವನ್ನು ಹಂಚಿಕೊಂಡರು. ಕನ್ನಡ ಚಲನಚಿತ್ರ ವಾಣಿಜ್ಯ ಮಂಡಳಿಯ ಕೃಷ್ಣೇಗೌಡ ಅವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದು, ಸಂಭ್ರಮಾಚರಣೆಗೆ ಸಾಥ್ ನೀಡಿದರು. ಬಹುನಿರೀಕ್ಷೆ ಹಾಗೂ ಕುತೂಹಲದೊಂದಿಗೆ ತೆರೆಕಂಡ 'ಅಮೆರಿಕಾ ಅಮೆರಿಕಾ-2' ಚಿತ್ರವು ಪ್ರೀತಿ, ಸಂಬಂಧಗಳು, ಭಾವನೆಗಳು ಮತ್ತು ಬದುಕಿನ ಆಯ್ಕೆಗಳ ಸುತ್ತ ಹೆಣೆದ ಕಥೆಯ ಮೂಲಕ ಪ್ರೇಕ್ಷಕರ ಗಮನ ಸೆಳೆದಿದೆ. ಚಿತ್ರದ 50ನೇ ದಿನದ ಸಂಭ್ರಮವು ಚಿತ್ರತಂಡದ ಪರಿಶ್ರಮ ಹಾಗೂ ಪ್ರೇಕ್ಷಕರು ತೋರಿದ ಪ್ರೀತಿಗೆ ಸಾಕ್ಷಿಯಾಯಿತು. ಕಾರ್ಯಕ್ರಮದಲ್ಲಿ ಮಾತನಾಡಿದ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್ ಅವರು, ಚಿತ್ರದ ನಿರ್ಮಾಣದ ಹಿಂದಿನ ಅನುಭವಗಳು, ಚಿತ್ರೀಕರಣದ ಸಂದರ್ಭಗಳು ಹಾಗೂ ಕಥೆಯನ್ನು ತೆರೆಯ ಮೇಲೆ ಕಟ್ಟಿಕೊಡುವಾಗ ಎದುರಾದ ಸವಾಲುಗಳನ್ನು ಹಂಚಿಕೊಂಡರು. ಪ್ರೇಕ್ಷಕರ ಪ್ರತಿಕ್ರಿಯೆ ಮತ್ತು ಚಿತ್ರದ ಬಗ್ಗೆ ದೊರೆಯುತ್ತಿರುವ ಮೆಚ್ಚುಗೆಯ ಕುರಿತು ಸಂತಸ ವ್ಯಕ್ತಪಡಿಸಿದರು. "ಚಿತ್ರದ ಗಳಿಕೆಯ ಬಗ್ಗೆ ಮಾತನಾಡುವುದು ನನಗೆ ಇಷ್ಟವಿಲ್ಲದ ಸಂಗತಿ. ವಿದೇಶಗಳಿಂದಲೂ ಅನೇಕ ಪ್ರೇಕ್ಷಕರು ಕರೆ ಮಾಡಿ ಚಿತ್ರದ ಬಗ್ಗೆ ಒಳ್ಳೆಯ ಮಾತುಗಳನ್ನಾಡುತ್ತಿದ್ದಾರೆ ಎಂದರು.



## ಶನೀಲ್ ಗೌತಮ್ ನಟನೆಯ 'ಶ್ರೀರಾಮಚಂದ್ರ'

'ಸು ಫ್ರಮ್ ಸೋ' ಚಿತ್ರದಲ್ಲಿ ರವಿ ಅಣ್ಣನಾಗಿ ಅಭಿನಯಿಸಿ ಪ್ರೇಕ್ಷಕರ ಗಮನ ಸೆಳೆದಿದ್ದ ಶನೀಲ್ ಗೌತಮ್ ಈಗ 'ಶ್ರೀರಾಮಚಂದ್ರ' ಚಿತ್ರದ ಮೂಲಕ ಮತ್ತೊಮ್ಮೆ ಪ್ರೇಕ್ಷಕರ ಮುಂದೆ ಬರಲು ಸಜ್ಜಾಗಿದ್ದಾರೆ. ಶನೀಲ್ ಗೌತಮ್ ಅವರ ಹುಟ್ಟುಹಬ್ಬದ ಪ್ರಯುಕ್ತ ಚಿತ್ರತಂಡವು ಚಿತ್ರದ ಶೀರ್ಷಿಕೆ ಹಾಗೂ ಆಕರ್ಷಕ ಪೋಸ್ಟರ್ ಅನ್ನು ಅನಾವರಣಗೊಳಿಸಿದೆ. 'ಪೊಗರು' ಖ್ಯಾತಿಯ ನಿರ್ಮಾಪಕ ಬಿ.ಕೆ. ಗಂಗಾಧರ್ ನಿರ್ಮಿಸುತ್ತಿರುವ ಈ ಚಿತ್ರಕ್ಕೆ 'ಫಾರೆಸ್ಟ್' ಖ್ಯಾತಿಯ ಚಂದ್ರ ಮೋಹನ್ ನಿರ್ದೇಶನ ಮಾಡುತ್ತಿದ್ದಾರೆ. ಕುಟುಂಬದ ಸಂಬಂಧ, ಭಾವನೆ ಮತ್ತು ಹಾಸ್ಯದ ಸಮ್ಮಿಲನ ಇದೊಂದು ಸಂಪೂರ್ಣ ಕೌಟುಂಬಿಕ ಮನರಂಜನೆಯ ಚಿತ್ರ. ಕುಟುಂಬದ ಸಂಬಂಧಗಳು, ಭಾವನೆಗಳು, ಅಣ್ಣ-ತಂಗಿಯರ ಕಿತ್ತಾಟ ಹಾಗೂ ಹಾಸ್ಯಕ್ಕೆ ಆದ್ಯತೆ ನೀಡಲಾಗಿದ್ದು, ಪ್ರೇಕ್ಷಕರನ್ನು ನಗಿಸುವುದರ ಜೊತೆಗೆ ಭಾವನಾತ್ಮಕವಾಗಿಯೂ ಕಾಡುವಂತಹ ಸನ್ನಿವೇಶಗಳು ಚಿತ್ರದಲ್ಲಿರಲಿವೆ. ವಿಭಿನ್ನ ಕಥಾಹಂದರದ ಮೂಲಕ ಪ್ರೇಕ್ಷಕರಿಗೆ ಹೊಸ ಅನುಭವ ನೀಡುವುದು ಚಿತ್ರತಂಡದ ಉದ್ದೇಶ. ಚಿತ್ರದ ಕಥೆಯನ್ನು ನಿರ್ಮಾಪಕ ಉದಯ್ ಕೆ ಮೆಹ್ತ ಅವರು ರೂಪಿಸಿದ್ದು, ನಿರ್ದೇಶಕ ಚಂದ್ರಮೋಹನ್ ಹಾಗೂ ಶನೀಲ್ ಗೌತಮ್ ಚಿತ್ರಕಥೆಯ ಕೆಲಸದಲ್ಲಿ ತೊಡಗಿಸಿಕೊಂಡಿದ್ದಾರೆ. ಕಥೆಯನ್ನು ಅಭಿವೃದ್ಧಿಪಡಿಸಲು ಸುಮಾರು ಐದಾರು ತಿಂಗಳುಗಳ ಕಾಲ ಮಂಗಳೂರಿನಲ್ಲಿ ಕುಳಿತು ಚಿತ್ರಕಥೆ ಸಿದ್ಧಪಡಿಸಲಾಗಿದೆ. ಉತ್ತಮ ಕಥೆಯುಳ್ಳ ಚಿತ್ರವನ್ನು ನಿರ್ಮಿಸಬೇಕೆಂಬ ಉದ್ದೇಶದಿಂದ ನಿರ್ಮಾಪಕ ಬಿ.ಕೆ. ಗಂಗಾಧರ್ ಅವರು ಹಲವು ಕಥೆಗಳನ್ನು ಆಲಿಸಿದ್ದರು.




## ಅಕ್ಕ ತಂಗಿಯರ ಭರತನಾಟ್ಯ ರಂಗಪ್ರವೇಶ

ಗತಿಶ್ರೀ ಪರ್ಫಾರ್ಮಿಂಗ್ ಆರ್ಟ್ಸ್ ಸೆಂಟರ್ (ರಿ) ವತಿಯಿಂದ ಆಯೋಜಿಸಲಾಗಿದ್ದ ನೂಪುರ ದ್ವಯಂ ಭರತನಾಟ್ಯ ರಂಗಪ್ರವೇಶ ಕಾರ್ಯಕ್ರಮ ಯಶಸ್ವಿಯಾಗಿ ನೆರವೇರಿತು. ವೈಯಾಲಿಕಾವಲಿನ ತೆಲುಗು ವಿಜ್ಞಾನ ಸಮಿತಿಯ ಕೃಷ್ಣದೇವರಾಯ ಸಭಾಂಗಣದಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಸಹೋದರಿಯರಾದ ಕುಮಾರಿ ಧನ್ಯಾ ಗಣೇಶ್ ಮತ್ತು ಕುಮಾರಿ ಸಿರಿ ಗಣೇಶ್ ಅವರ ಜೋಡಿ ರಂಗಪ್ರವೇಶ ನೃತ್ಯಕಾರ್ಯಕ್ರಮ ಎಲ್ಲರ ಮನಗೆದ್ದಿತು. ನಿರ್ಮಾಪಕ ಗಣೇಶ್ ಕೃಷ್ಣಮೂರ್ತಿ ಅವರ ಪುತ್ರಿಯರು ಹಾಗೂ ವಿದುಷಿ ಶ್ರೀಮತಿ ಶ್ರೀಲಕ್ಷ್ಮಿ ತೇಜಸ್ ಅವರ ಶಿಷ್ಯೆಯರಾದ ಈ ಸಹೋದರಿಯರು ಸುಮಾರು ನಾಲ್ಕು ಗಂಟೆಗಳ ಕಾಲ ವಿವಿಧ ಭರತನಾಟ್ಯ ಪ್ರಾಕಾರ ಗಳನ್ನು ಅಚ್ಚುಕಟ್ಟಾಗಿ ಪ್ರಸ್ತುತ ಪಡಿಸಿ, ನೆರೆದಿದ್ದ ಕಲಾಭಿಮಾನಿಗಳಿಂದ ಚಪ್ಪಾಳೆ ಗಿಟ್ಟಿಸಿಕೊಂಡರು. ಕಾರ್ಯಕ್ರಮದಲ್ಲಿ ಗುರು ಡಾ.ಲಲಿತಾ ಶ್ರೀನಿವಾಸನ್ (ನಿ ರ್ದೇಶಕರು, ನೂಪುರ ಸ್ಕೂಲ್ ಆಫ್ ಭರತನಾಟ್ಯ) ಮುಖ್ಯ ಅತಿಥಿಯಾಗಿ ಆಗಮಿಸಿ ದ್ದರು. ಗೌರವಾನ್ವಿತ ಅತಿಥಿಗಳಾಗಿ ಹೈಕೋರ್ಟ್ ನಿವೃತ್ತ ನ್ಯಾಯ ಮೂರ್ತಿಗಳಾದ ಎನ್. ಕುಮಾರ್ ಹಾಗೂ ಕ ರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಅಧ್ಯಕ್ಷೆ ಶ್ರೀಮತಿ ಶುಭಾ ಧನಂಜಯ್ ಭಾಗವಹಿಸಿ ಸಹೋದರಿಯರಿಗೆ ಶುಭ ಹಾರೈಸಿದರು.



## 'ಚೆಂಕೋಲ್ ದಿ ಲಾಸ್ಟ್ ಕಿಂಗ್‌ಡಮ್' ಸಿನಿಮಾದಿಂದ ಮಾಸ್ ಸಾಂಗ್ ರಿಲೀಸ್

ಕನ್ನಡ ಚಿತ್ರರಂಗದ ಪ್ರತಿಭಾನ್ವಿತ ನಟ ಆರ್ಯನ್ ಸಂತೋಷ್ ಈಗ ನಿರ್ದೇಶಕರಾಗಿ ಹೊಸ ಹೆಜ್ಜೆ ಇಡುತ್ತಿದ್ದಾರೆ. ಅವರು ನಟಿಸಿ, ಮೊದಲ ಬಾರಿಗೆ ಆಕ್ಷನ್‌ಕಟ್ ಹೇಳಿರುವ ಮಹತ್ವಾಕಾಂಕ್ಷೆಯ ಸಿನಿಮಾ 'ಚೆಂಕೋಲ್: ದಿ ಲಾಸ್ಟ್ ಕಿಂಗ್‌ಡಮ್'. ಬೃಹತ್ ಕ್ಯಾನ್ವಾಸ್, ನಿಗೂಢತೆ ಹಾಗೂ ವಿಭಿನ್ನ ಕಾಲಘಟ್ಟಗಳ ಕಥಾಹಂದರ ಹೊಂದಿರುವ ಈ ಫ್ಯಾಂಟಸಿ ಡ್ರಾಮಾದಿಂದ ಇದೀಗ ಮಾಸ್ ಸಾಂಗ್ ಒಂದು ಬಿಡುಗಡೆಯಾಗಿ ಸದ್ದು ಮಾಡುತ್ತಿದೆ. "ಅತಿಶಯ ಪುಲಿ ಕಲಾ ನೋಡಿದ್ಯಾ ಇವ್ನಾ.. ಕ್ಲೀನ್ ಶೇವ್ ತಿಳಿ ಮೈಕಟ್ ಫೇರ್ ಆದ ಬಣ್ಣ.." ಎಂಬ ಸಾಹಿತ್ಯವಿರುವ ಈ ಗೀತೆ ಪ್ರೇಕ್ಷಕರಿಂದ ಉತ್ತಮ ಮೆಚ್ಚುಗೆ ಪಡೆದುಕೊಳ್ಳುತ್ತಿದ್ದು, ಚಿತ್ರದಲ್ಲಿ ಆರ್ಯನ್ ನಿರ್ವಹಿಸಿರುವ 'ಡಿಜೆ ಸಂತು' ಪಾತ್ರದ ಖದರ್ ಅನ್ನು ಪರಿಚಯಿಸಿದೆ.



## ನಾಲ್ಕು ಬಿಟ್ ಸಾಂಗ್‌ಗಳ ಮೂಲಕ ಗಮನ ಸೆಳೆದ 'ರಾಶಿ'; ನ. 13 ಬಿಡುಗಡೆ

ಧುವನ್ ಫಿಲಂಸ್ ಲಾಂಛನದಲ್ಲಿ ಅಖಿಲೇಶ್ ಎಂ. ನಿರ್ಮಿಸಿರುವ, ವಿಜಯ್ ಪಾಳೇಗಾರ್ ನಿರ್ದೇಶನದ ಹಾಗೂ ಸುಪ್ರೀಂ ಹೀರೋ ಶಶಿಕುಮಾರ್ ಅವರ ಪುತ್ರ ಆದಿತ್ಯ ಶಶಿಕುಮಾರ್ ನಾಯಕನಾಗಿ ನಟಿಸಿರುವ 'ರಾಶಿ' ಚಿತ್ರ ಬಿಡುಗಡೆಗೆ ಸಜ್ಜಾಗಿದೆ. ಆರಂಭದಿಂದಲೂ ತನ್ನ ವಿಭಿನ್ನ ಪ್ರಯತ್ನಗಳ ಮೂಲಕ ಕುತೂಹಲ ಮೂಡಿಸಿರುವ ಈ ಚಿತ್ರದ ಹಾಡುಗಳು ಈಗಾಗಲೇ ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾಗಿವೆ. ಇದೀಗ ಚಿತ್ರದ ನಾಲ್ಕು ಬಿಟ್ ಸಾಂಗ್‌ಗಳನ್ನು ಒಟ್ಟಿಗೆ 'ಫೀಲ್ ಆಫ್ ರಾಶಿ' ಹೆಸರಿನಲ್ಲಿ ಬಿಡುಗಡೆ ಮಾಡುವ ಮೂಲಕ ಚಿತ್ರತಂಡ ಹೊಸ ಪ್ರಯೋಗಕ್ಕೆ ಮುಂದಾಗಿದೆ. ನಿರ್ದೇಶಕ ವಿಜಯ್ ಪಾಳೇಗಾರ್ ಅವರೇ ಸಾಹಿತ್ಯ ರಚಿಸಿ, ಸಂಗೀತ ಸಂಯೋಜಿಸಿರುವ ಈ ನಾಲ್ಕು ಬಿಟ್ ಸಾಂಗ್‌ಗಳಿಗೆ ಜನಪ್ರಿಯ ಗಾಯಕರು ಧ್ವನಿಯಾಗಿದ್ದಾರೆ.



## ಮರ್ಡರ್ ಮಿಸ್ಟ್ರಿ ಸುತ್ತ ನಡೆಯುವ "ಅಮರಾವತಿ ಪೋಲೀಸ್ ಸ್ಟೇಷನ್"

ಕಡಲ ತೀರದ ಕಾಲ್ಪನಿಕ ಅಮರಾವತಿ ಎಂಬ ಊರಲ್ಲಿ ನಡೆಯುವ ಮಿಸ್ಸಿಂಗ್, ಮರ್ಡರ್, ಅಚ್ಚರಿ ಎನಿಸುವ ಘಟನೆಗಳ ಸುತ್ತ ನಡೆಯುವ ಸಸ್ಪೆನ್ಸ್, ಥ್ರಿಲ್ಲರ್ ಕಥಾಹಂದರ ಒಳಗೊಂಡ ಚಿತ್ರ 'ಅಮರಾವತಿ ಪೋಲೀಸ್ ಸ್ಟೇಷನ್'. ಧರ್ಮ ಕೀರ್ತಿರಾಜ್ ನಾಯಕನಾಗಿ ನಟಿಸಿರುವ ಈ ಚಿತ್ರದಲ್ಲಿ ಗುರುರಾಜ್ ಜಗ್ಗೇಶ್ ಒಂದು ವಿಶೇಷ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಪುನೀತ್ ಅರಸೀಕೆರೆ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿರುವ ಈ ಚಿತ್ರದ ಟ್ರೈಲರ್‌ನ್ನು ಫಿಲಂ ಚೇಂಬರ್ ಮಾಜಿ ಅಧ್ಯಕ್ಷ ಬಾಮ ಹರೀಶ್ ಹಾಗೂ ಹಿರಿಯ ಪ್ರಚಾರಕರ್ತರಾದ ನಾಗೇಂದ್ರ ಅವರುಗಳು ಬಿಡುಗಡೆಗೊಳಿಸಿ ಚಿತ್ರತಂಡಕ್ಕೆ ಶುಭ ಹಾರೈಸಿದರು. ಇದ್ದಕ್ಕಿದ್ದ ಹಾಗೆ ಕಾಣೆಯಾಗುವ ಊರಗೌಡ, ಪ್ರಕರಣ ಪತ್ತೆಹಚ್ಚಲು ಬಂದ ಪೋಲೀಸ್ ಕೂಡ ಕಾಣೆಯಾಗುತ್ತಾನೆ. ಇದೆಲ್ಲದರ ಹಿಂದೆ ಯಾರ ಕೈವಾಡವಿದೆ, ಇದರ ಮರ್ಮವೇನು ಎಂದು ಪತ್ತೆ ಹಚ್ಚಲು ಅಮರಾವತಿಗೆ ಬರುವ ಮಫ್ತಿ ಪೋಲೀಸ್ ಕಥೆಯೇ ಅಮರಾವತಿ ಪೋಲೀಸ್ ಸ್ಟೇಷನ್.



## ನೈಜ ಹ್ಯೂಮನಾಯ್ಡ್ ರೋಬೋಟ್ ನಟನೆ, ಭಾರತೀಯ ಚಿತ್ರರಂಗದಲ್ಲೇ ಮೊದಲು !

ಸ್ಯಾಂಡಲ್‌ವುಡ್‌ನ ಪ್ರತಿಭಾವಂತ ನಿರ್ದೇಶಕ ಸಿಂಪಲ್ ಸುನಿ ಇದೀಗ ಸೈನ್ಸ್ ಫಿಕ್ಷನ್ ಜಗತ್ತಿಗೆ ಅಡಿಯಿಟ್ಟಿದ್ದು, ಅವರ ನಿರ್ದೇಶನದ ಬಹುನಿರೀಕ್ಷಿತ 'ಲಂಬೋದರ 2.0' ಸಿನಿಮಾದ ಟ್ರೇಲರ್ ಕನ್ನಡ ಹಾಗೂ ಹಿಂದಿ ಭಾಷೆಗಳಲ್ಲಿ ಅದ್ಧೂರಿಯಾಗಿ ಬಿಡುಗಡೆಯಾಗಿದೆ. ರೆಗ್ಯುಲರ್ ಸಿಜಿ ಗ್ರಾಫಿಕ್ಸ್ ತಂತ್ರಜ್ಞಾನವನ್ನು ಸಂಪೂರ್ಣವಾಗಿ ಬದಿಗೊತ್ತಿ, ಭಾರತೀಯ ಚಿತ್ರರಂಗದಲ್ಲೇ ಮೊದಲ ಬಾರಿಗೆ ನೈಜ ಭೌತಿಕ ಹ್ಯೂಮನಾಯ್ಡ್ ರೋಬೋಟ್‌ಗೆ ಪ್ರಮುಖ ಪಾತ್ರ ನೀಡಿ ಚಿತ್ರೀಕರಿಸಿರುವುದು ಈ ಸಿನಿಮಾದ ಹೆಗ್ಗಳಿಕೆಯಾಗಿದೆ. ಸಿನಿಮಾ ಪ್ರೇಮಿಗಳಲ್ಲಿ ಭಾರಿ ಕುತೂಹಲ ಮೂಡಿಸಿರುವ ಟ್ರೇಲರ್ ಈಗಾಗಲೇ ಸೋಷಿಯಲ್ ಮೀಡಿಯಾದಲ್ಲಿ ಸದ್ದು ಮಾಡುತ್ತಿದ್ದು, ಚಿತ್ರವು ಇದೇ ನ. 13ರಂದು ಬೆಳ್ಳಿತೆರೆಗೆ ಬರಲು ಸಜ್ಜಾಗಿದೆ. ಈ ವೈಜ್ಞಾನಿಕ ಕಥೆಗೆ ಜೀವ ತುಂಬಲು ಬೆಂಗಳೂರು ಮೂಲದ ತಂತ್ರಜ್ಞಾನ ಸಂಸ್ಥೆ 'ಮಚಾನಿ ರೋಬೋಟಿಕ್ಸ್' ಅಭಿವೃದ್ಧಿಪಡಿಸಿರುವ ಅತ್ಯಾಧುನಿಕ ಹ್ಯೂಮನಾಯ್ಡ್ ರೋಬೋಟ್ 'ಜಿಯಾ'ಳನ್ನು ಬಳಸಿಕೊಳ್ಳಲಾಗಿದೆ.



## ಶಾರುಖ್ ಖಾನ್ ಹುಟ್ಟುಹಬ್ಬಕ್ಕೆ 'ಕಿಂಗ್' ಚಿತ್ರದ 'ತು ಮಿಲ್ ಜಾಯೆ' ಹಾಡು ರಿಲೀಸ್

ಬಾಲಿವುಡ್ ಬಾದ್‌ಶಾ ಶಾರುಖ್‌ಖಾನ್ ತಮ್ಮ ಹುಟ್ಟುಹಬ್ಬದ ಸಂಭ್ರಮದಲ್ಲಿದ್ದು, ಈ ವಿಶೇಷ ದಿನದಂದು ಅಭಿಮಾನಿಗಳಿಗೆ ಅದ್ಭುತ ಉಡುಗೊರೆ ನೀಡಿದ್ದಾರೆ. ಅವರ ಬಹುನಿರೀಕ್ಷಿತ ಆಕ್ಷನ್ ಎಂಟರ್‌ಟೈನರ್ 'ಕಿಂಗ್' ಚಿತ್ರದ ಮೊದಲ ಹಾಡು'ತುಮಿಲ್ ಜಾಯೆ' ಬಿಡುಗಡೆಯಾಗಿದ್ದು, ಸಂಗೀತ ಮತ್ತು ಸಿನಿಮಾ ಪ್ರಿಯರಲ್ಲಿ ಹೊಸ ಸಂಚಲನ ಮೂಡಿಸಿದೆ. ಜಾಗತಿಕ ಮಟ್ಟದ ಪ್ರತಿಭೆಗಳನ್ನು ಒಟ್ಟುಗೂಡಿಸಿರುವ ಈ ಹಾಡಿನಲ್ಲಿ ಶಾರುಖ್ ಖಾನ್ ಮತ್ತು ದೀಪಿಕಾ ಪಡು ಕೋಣೆ ಜೋಡಿ ಮತ್ತೊಮ್ಮೆ ತಮ್ಮ ಅದ್ಭುತ ಆನ್‌ಸ್ಕ್ರೀನ್ ಕೆಮಿಸ್ಟ್ರಿ ಮೂಲಕ ಕಮಾಲ್ ಮಾಡಿದೆ. ಚಿತ್ರದ ಜಗತ್ತನ್ನು ಪರಿಚಯಿಸುವ ಈ ವಿಡಿಯೋ ಹಾಡು ಶಾರುಖ್‌ಖಾನ್ ಅವರ ಖಡಕ್ ಡೈಲಾಗ್‌ನೊಂದಿಗೆ ಪ್ರಾರಂಭವಾಗುತ್ತದೆ. 'ಮೈ ಖಾತಿಲ್ ನಹಿ, ಆಶಿಕ್ ಹೂಂ, ಔರ್ ನಿಶಾನಾ ಮೇರಿ ಮಶೂಕಾ, ಔರ್ ವೋಹ್ ಆಶಿಕ್ ಹಿಕ್ಯಾ ಜೋ ದಿಲ್ ಚೀರ್ ನಾದೇ' ಎಂಬ ಮಾತುಗಳು ಅವರ ಪಾತ್ರದ ತೀವ್ರತೆಯನ್ನು ತೋರಿಸಿಕೊಟ್ಟಿವೆ.






# ಕರ್ನಾಟಕ ಚಲನಚಿತ್ರ ನಿರ್ದೇಶಕರ ಸಂಘ(ಕಾನ್ಫಿಡ)ದಲ್ಲಿ ಅದ್ದೂರಿ ಕನ್ನಡ ರಾಜ್ಯೋತ್ಸವ..



ಎಸ್ ಆರ್ ಪುಟ್ಟಣ್ಣ ಕಣಗಾಲರು ಮತ್ತು ಹಿರಿಯ ನಿರ್ದೇಶಕರುಗಳ ಸಾರಥ್ಯದಲ್ಲಿ 1984ರಲ್ಲಿ ಪ್ರಾರಂಭವಾದ ಕರ್ನಾಟಕ ಚಲನಚಿತ್ರ ನಿರ್ದೇಶಕರ ಸಂಘದಲ್ಲಿ ಅಧ್ಯಕ್ಷರಾದ ಎನ್ನಾರ್ ಕೆ ವಿಶ್ವನಾಥ್ ನೇತೃತ್ವದಲ್ಲಿ ಸಂಘದ ಕಚೇರಿಯಲ್ಲಿ ಕನ್ನಡ ರಾಜ್ಯೋತ್ಸವವನ್ನು ಅದ್ದೂರಿಯಾಗಿ ನಡೆಸಲಾಯಿತು. ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗಳಲ್ಲಿ ಸ್ವರ್ಣಕಮಲ ಪ್ರಶಸ್ತಿಯನ್ನೂ ಸೇರಿ, ಅನೇಕ ರಾಷ್ಟ್ರ ಮತ್ತು ರಾಜ್ಯ ಚಲನಚಿತ್ರ ಪ್ರಶಸ್ತಿಗಳನ್ನು ಪಡೆದಿರುವ ಹಿರಿಯ ಚಲನಚಿತ್ರ ನಿರ್ದೇಶಕರು, ಬರಹಗಾರರು, ನಿರ್ಮಾಪಕರು ಆಗಿರುವ ಪಿ ಆರ್ ರಾಮದಾಸ ನಾಯ್ಡು ಅವರು ಧ್ವಜಾರೋಹಣ ಮಾಡಿ ರಾಜ್ಯೋತ್ಸವದ ಶುಭಾಶಯಗಳನ್ನು ತಿಳಿಸಿದರು. ಚಿಂದೋಡಿ ಬಂಗಾರೇಶ್, ಟಿ ಜನಾರ್ಧನ್, ಗುರುಪ್ರಸಾದ್ ಪತ್ತಿ, ಅಂಚೆಹಳ್ಳಿ ಶಿವಕುಮಾರ್, ಅವಿನಾಶ್ ಶೆಟ್ಟಿ, ಕೈಲಾಶ್ ಮಳವಳ್ಳಿ, ಜಗನ್ ಬಾಬು, ಅಶೋಕ್ ಕಡಬ, ನಿತ್ಯಾನಂದ ಪ್ರಭು, ಆರ್ ವಿಜಯ ಕುಮಾರ್ ಸೇರಿದಂತೆ ಎಲ್ಲಾ ನಿರ್ದೇಶಕರಗಳು ಶುಭಕೋರಿದರು. ಸಂಘದ ಕಾರ್ಯದರ್ಶಿಗಳಾದ ಜಿತೇಂದ್ರ ಜೋಸೈಮನ್, ಖಜಾಂಚಿಗಳಾದ ಆದಿತ್ಯ ಚಿಕ್ಕಣ್ಣ, ಕಾರ್ಯಕಾರಿ ಸಮಿತಿ ಸದಸ್ಯರಾದ ಎಸ್ ಆರ್ ಪ್ರಮೋದ್, ಆರ್ ಶಿವಶಂಕರ್, ಅನುತೇಜ ರಮೇಶ್, ನಟರಾಜ್, ಶ್ರೀನಿವಾಸ ಮೂರ್ತಿ ಮುಂತಾದವರು ಈ ಸಂದರ್ಭದಲ್ಲಿ ಹಾಜರಿದ್ದರು.



## ರಜನಿ–ಕಮಲ್ 'ಧರ್ಮನ್' ಚಿತ್ರಕ್ಕೆ ಶ್ರೀಲೀಲಾ ಎಂಟ್ರಿ..

ಸೂಪರ್‌ಸ್ಟಾರ್ ರಜನಿಕಾಂತ್ ನಟನೆಯ ಹಾಗೂ ಕಮಲ್ ಹಾಸನ್ ನಿರ್ಮಿಸುತ್ತಿರುವ 'ಧರ್ಮನ್' ಚಿತ್ರದ ತಾರಾಗಣ ದಿನದಿಂದ ದಿನಕ್ಕೆ ಮತ್ತಷ್ಟು ಬಲಿಷ್ಠಗೊಳ್ಳುತ್ತಿದೆ. ಇದೀಗ ಚಿತ್ರತಂಡಕ್ಕೆ ನಟಿ ಶ್ರೀಲೀಲಾ ಪ್ರಮುಖ ಪಾತ್ರ ಕ್ಕಾಗಿ ಅಧಿಕೃತವಾಗಿ ಸೇರ್ಪಡೆಗೊಂಡಿದ್ದಾರೆ. ಈ ವಿಚಾರವನ್ನು ಚಿತ್ರತಂಡ ಪ್ರಕಟಿಸಿದ್ದು, ಅಭಿಮಾನಿಗಳಲ್ಲಿ ಚಿತ್ರದ ಬಗೆಗಿನ ನಿರೀಕ್ಷೆ ದುಪ್ಪಟ್ಟಾಗಿದೆ. ರಾಜ್‌ಕಮಲ್ ಫಿಲ್ಮ್ಸ್ ಇಂಟರ್‌ನ್ಯಾಷನಲ್ ಹಾಗೂ ಟರ್ಮರಿಕ್ ಮೀಡಿಯಾ ಬ್ಯಾನರ್‌ಗಳ ಅಡಿಯಲ್ಲಿ ಕಮಲ್ ಹಾಸನ್ ಮತ್ತು ಆರ್. ಮಹೇಂದ್ರನ್ ಈ ಬಿಗ್ ಬಜೆಟ್ ಸಿನಿಮಾವನ್ನು ಜಂಟಿಯಾಗಿ ನಿರ್ಮಿಸುತ್ತಿದ್ದಾರೆ. 'ಓ ಮೈ ಕಡವುಳೆ' ಖ್ಯಾತಿಯ ಅಶ್ವತ್ಥ್ ಮಾರಿಮುತ್ತು ಈ ಚಿತ್ರವನ್ನು ನಿರ್ದೇಶನ ಮಾಡುತ್ತಿದ್ದು, ಹೊಸ ಬಗೆಯ ಕಥಾಹಂದರದ ಮೂಲಕ ಪ್ರೇಕ್ಷಕರನ್ನು ರಂಜಿಸಲು ಸಜ್ಜಾಗಿದ್ದಾರೆ. ಇದೀಗ ಶ್ರೀಲೀಲಾ ಅವರ ಆಗಮನದಿಂದ ಚಿತ್ರದ ಮೆರುಗು ಮತ್ತಷ್ಟು ಹೆಚ್ಚಿದೆ.




## ಎಪಿ ಅರ್ಜುನ್ ಫಿಲ್ಮ್ಸ್ 'ಲಕ್ಷ್ಮಿಪುತ್ರ' ನ.27ಕ್ಕೆ ತೆರೆಗೆ

ಸ್ಯಾಂಡಲ್‌ವುಡ್‌ನ ಜನಪ್ರಿಯ ಹಾಸ್ಯ ನಟ ಚಿಕ್ಕಣ್ಣ ಮುಖ್ಯ ಭೂಮಿಕೆಯಲ್ಲಿ ನಟಿಸಿರುವ 'ಲಕ್ಷ್ಮಿಪುತ್ರ' ಚಿತ್ರದ "ಐ ಲವ್ ಯೂ ಪರಿಮಳ" ಎಂಬ ಲಿರಿಕಲ್ ವಿಡಿಯೋ ಹಾಡು ಅಧಿಕೃತವಾಗಿ ಬಿಡುಗಡೆಯಾಗಿದೆ. ಈ ಹಾಡಿಗೆ ಖ್ಯಾತ ಗಾಯಕ ನವೀನ್ ಸಜ್ಜು ಧ್ವನಿಯಾಗಿದ್ದು, ಅರ್ಜುನ್ ಜನ್ಯ ಸಂಗೀತ ಸಂಯೋಜನೆ ಮಾಡಿದ್ದಾರೆ. ಎ.ಪಿ. ಅರ್ಜುನ್ ಅವರ 'ಎಪಿ ಅರ್ಜುನ್ ಫಿಲ್ಮ್ಸ್' ಬ್ಯಾನರ್ ನಡಿಯಲ್ಲಿ ಅನ್ನಪೂರ್ಣ ಎ.ಪಿ. ಅರ್ಜುನ್ ಈ ಚಿತ್ರವನ್ನು ನಿರ್ಮಿಸಿದ್ದು, ರವಿಕಿರಣ್ ಎಂ. ಗೌಡ ಸಹ ನಿರ್ಮಾಪಕರಾಗಿ ಸಾಥ್ ನೀಡಿದ್ದಾರೆ. ಚಿತ್ರಕ್ಕೆ ವಿಜಯ್ ಎಸ್. ಸ್ವಾಮಿ ಆಕ್ಷನ್ ಕಟ್ ಹೇಳಿದ್ದು, ನಿರ್ದೇಶಕರ ಜೊತೆಗೂಡಿ ಸ್ವತಃ ಎ.ಪಿ. ಅರ್ಜುನ್ ಅವರೇ ಕಥೆ, ಚಿತ್ರಕಥೆ, ಸಾಹಿತ್ಯ ಮತ್ತು ಸಂಭಾಷಣೆ ರಚನೆಯ ಜವಾಬ್ದಾರಿ ಹೊತ್ತುಕೊಂಡಿದ್ದಾರೆ. ಇವರಿಗೆ ಸಂಭಾಷಣೆಯಲ್ಲಿ ಪ್ರಶಾಂತ್ ರಾಜಪ್ಪ ಹಾಗೂ ವಿಜಯ್ ಈಶ್ವರ್ ಕೈಜೋಡಿಸಿದ್ದಾರೆ.






KARAVALI THARANGINI Weekly Owned, Editor, Published & Printed by Lalithasri Preetham Rai No.2-64/54(12), Pushparaj Nilaya, Jayanagara, 3rd 'A' Maroli Village, Dakshina Kannada, Karnataka - 575005.
email: karavalitharangini@gmail.com, web: karavalitharangini.com ph: 9880109212 Printed at Bhima Samskruthi Printers & Publishers, No 1182 14th Main Road Prakash Nagar, Bengaluru Karnataka-560021